# ಬೃಹಚ್ಚರಣ

ತ್ರೈಮಾಸಿಕ ವಾರ್ತಾ ಪತ್ರಿಕೆ


| ಸಂಘದ ಸದಸ್ಯರಾಗಿ |
| --- |
| ಮಹಾ ಪೋಷಕರು – 25,000/– |
| ಪೋಷಕರು – 5,000/– |
| ಸದಸ್ಯತ್ವ – 1,000/– |
| ವಾರ್ಷಿಕ ನಿರ್ವಹಣೆ – 500/– |


ಸಂಪುಟ : 8 ಸಂಚಿಕೆ : 3 ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟೆಂಬರ್ 2018


## ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರ

ಹಬ್ಬಗಳ ಸಾಲು ಪ್ರಾರಂಭವಾಗಿದೆ. ತಮ್ಮ ಕುಟುಂಬದವರಿಗೆಲ್ಲಾ ದೇವರು ಆರೋಗ್ಯ, ನೆಮ್ಮದಿ ಸದಾ ನೀಡಲೆಂದು ಆಶಿಸುತ್ತೇನೆ.

ದಿನಾಂಕ 22–7–2018ನೇ ಭಾನುವಾರದಂದು 2017–18ರ ಸರ್ವಸದಸ್ಯರ ಸಭೆಯು ಅತ್ಯಂತ ಯಶಸ್ವಿಯಾಗಿ ನಡೆದುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ. ಆಯವ್ಯಯ ಮಂಡನೆಗೆ ಸರ್ವಾನುಮತದಿಂದ ಸದಸ್ಯರು ಅನುಮೋದಿಸಿರುವುದೇ ಇದಕ್ಕೆ ಸಾಕ್ಷಿ. ಈ ಬಾರಿಯ ಸರ್ವಸದಸ್ಯರ ಸಭೆಯಲ್ಲಿ ಪೋಷಕರು, ಹಿರಿಯ ಸದಸ್ಯರಾದ ಶ್ರೀಯುತ ಬಿ.ಎಸ್. ಪದ್ಮನಾಭ್, ಬಿ.ಎಸ್. ಸೂರ್ಯನಾರಾಯಣ್, ಬಿ.ಎನ್.ಜಿ. ಕುಮಾರ್ ಹಾಗೂ ಇತರ ಸದಸ್ಯರು ನಮ್ಮ ಸಂಘದಿಂದ ಬ್ರಾಹ್ಮಣ ಸಮುದಾಯಕ್ಕೆ ಉತ್ತರಕ್ರಿಯೆಗಳಿಗೆ ಅನುಕೂಲವಾಗುವಂತೆ **'ವೈಕುಂಠ ವಾಹನ'**ವೊಂದನ್ನು ಅಪರಕರ್ಮ ಮಾಡುವ ಸಂಸ್ಥೆಗೆ ನೀಡಬೇಕೆಂದು ಸಲಹೆ ನೀಡಿದರು. ಇದರ ಬಗ್ಗೆ ಸಂಘ ಸಲ್ಲಿಸಿದ ಮನವಿಗೆ ಸದಸ್ಯರು ಧನಾತ್ಮಕವಾಗಿ ಸ್ಪಂದಿಸಿದ್ದು ಉದಾರವಾಗಿ ದೇಣಿಗೆಯನ್ನು ನೀಡಿರುವುದಕ್ಕೆ ದಾನಿಗಳಿಗೆ ಸಂಘದ ಕೃತಜ್ಞತೆಗಳು. ಅಕ್ಟೋಬರ್ 2018ರ ಮಾಹೆಯಲ್ಲಿ ಹೊಸ ವಾಹನವೊಂದನ್ನು ನೋಂದಾಯಿತ ಸಂಸ್ಥೆಗೆ ಹಸ್ತಾಂತರಿಸಲಾಗುವುದು.

ವಾರ್ಷಿಕ ನಿರ್ವಹಣಾ ವೆಚ್ಚವನ್ನು ನೀಡಿರುವ ಸದಸ್ಯರಿಗೆ ವಂದನೆಗಳನ್ನು ತಿಳಿಸುತ್ತಾ ನೀಡಬೇಕಾದವರು ಆದಷ್ಟು ಬೇಗ ಕೊಡುತ್ತೀರೆಂದು ನಂಬಿದ್ದೇನೆ.

ವಂದನೆಗಳು,




**ಎಸ್. ಸೋಮಸುಂದರ**
ಅಧ್ಯಕ್ಷರು

## ಸಂಪಾದಕೀಯ

ತಮ್ಮೆಲ್ಲರ ಸಹಕಾರದಿಂದ 'ಬೃಹಚ್ಚರಣ' ತ್ರೈಮಾಸಿಕ ಪತ್ರಿಕೆಯ 18 ಸಂಚಿಕೆಗಳಿಗೆ ಸಂಪಾದಕನಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಸಂತೋಷವಿದೆ. ಸಂಘವು ಸದಸ್ಯರ ಸಲಹೆಗಳನ್ನು ಮಾನ್ಯತೆ ಮಾಡಿ ಈ ಸಂಚಿಕೆಯು ಮತ್ತೊಮ್ಮೆ ಹೊಸ ವಿನ್ಯಾಸದಿಂದ ಹೊರಬಂದಿದೆ. ಇದು ತಮ್ಮ ಅಭಿಪ್ರಾಯಕ್ಕೆ ಸ್ಪಂದಿಸಿದೆ ಎಂದು ಭಾವಿಸುತ್ತೇನೆ. ತಮ್ಮಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಲೇಖನ, ಛಾಯಾಚಿತ್ರಗಳು ಹಾಗೂ ತಮ್ಮ ಕುಟುಂಬಗಳಲ್ಲಿ ನಡೆಯುವ ಶುಭ ಸಮಾರಂಭಗಳ ವಿವರ ನೀಡಲು ಕೋರಿದೆ.

ನಮಸ್ಕಾರ.



**ಕೆ.ಸಿ. ನಟರಾಜ್**
ಸಂಪಾದಕ

## 2017–18ರ
## ಸರ್ವ ಸದಸ್ಯರ ಸಭೆಯ ವಿಶೇಷಾಂಕ




ಆತ್ಮೀಯ ಸದಸ್ಯರೇ,

### ಒಂದು ದಿನದ ಪ್ರವಾಸ

ಪ್ರತಿ ವರ್ಷದಂತೆ ಈ ವರ್ಷವೂ **ನವೆಂಬರ್** ತಿಂಗಳ **25ನೇ ತಾರೀಖು ಭಾನುವಾರ,** ಶಿವನ ಸಮುದ್ರದ ಬಳಿ ಇರುವ ಮಧ್ಯರಂಗದ ಶ್ರೀ ರಂಗನಾಥ ಸ್ವಾಮಿ, ಶ್ರೀ ಆದಿ ಶಂಕರರು ಸ್ಥಾಪಿಸಿದ ಶ್ರೀಚಕ್ರ ಮೀನಾಕ್ಷೀ ಸೋಮೇಶ್ವರ, ಕಾವೇರಿ ನದಿಯ ತಟದಲ್ಲಿರುವ ಸತ್ತೇಗಾಲದ ಶ್ರೀ ಕೋಟೆ ವರದರಾಜ ಸ್ವಾಮಿ ಮೊದಲಾದ ದೇವಾಲಯಗಳನ್ನು ನೋಡುವ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

ಮಾಮೂಲಿನಂತೆ ಪ್ರವಾಸಿಗರಿಗೆ ಉಪಹಾರ, ಮಧ್ಯಾಹ್ನದ ಭೋಜನ, ರಾತ್ರಿಯ ಊಟದ ಬುತ್ತಿ ಇತರೆ ಅನುಕೂಲಗಳನ್ನು ವ್ಯವಸ್ಥಿತವಾಗಿ ಏರ್ಪಡಿಸಲು ಪ್ರಯತ್ನಗಳನ್ನು ಕೈಗೊಳ್ಳಲಾಗುವುದು.

ಹೆಚ್ಚಿನ ವಿವರಗಳನ್ನು ಶೀಘ್ರದಲ್ಲಿ ಸದಸ್ಯರಿಗೆ ತಿಳಿಸಲಾಗುವುದು. ಆಸಕ್ತಿಯುಳ್ಳವರು, ಮುಂದಿನ ದಿನಗಳಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಲು ವಿನಂತಿ.

ಪ್ರವಾಸದ ಅಂದಾಜು ವೆಚ್ಚ – ಪ್ರತಿ ಪ್ರವಾಸಿಗರಿಗೆ ತಲಾ ರೂ.1200/–



**ವಿ.ಎಸ್. ಮಣಿ**
ಕಾರ್ಯದರ್ಶಿ,
ಮೈ.ಮಂ.ದ್ರಾ.ಬೃ.ಸಂಘ.

### ಸಂಘದ ಹೊಸ ಸದಸ್ಯರಿಗೆ – ಸ್ವಾಗತ

ಶ್ರೀಯುತರಾದ

| | |
| --- | --- |
| ಎ.ಪಿ. ಶೇಷಾದ್ರಿ | ಸೌಮ್ಯ ಕುಮಾರ್ |
| ನಿತಿನ್ ಭಾಸ್ಕರ್ | ಮಧು ಕಶ್ಯಪ್ |
| ಎ.ಪಿ. ವೆಂಕಟೇಶ ಶರ್ಮ | ಸೌಮ್ಯ ರಘುನಾಥ್ |
| ಸುಧಾಮ ಸಿ. ಶಾಸ್ತ್ರಿ | ವೇಣುಗೋಪಾಲ್ ಎಸ್. |

# ನೂತನ ಕಾರ್ಯಕಾರಿ ಸಮಿತಿ


ಎಸ್. ಸೋಮಸುಂದರ
ಅಧ್ಯಕ್ಷರು


ಎಚ್.ಕೆ. ಶಶಿಧರ್
ಕಾರ್ಯಾಧ್ಯಕ್ಷರು


ಎಸ್. ಸಿ. ಶ್ರೀನಿವಾಸ
ಉಪಾಧ್ಯಕ್ಷರು


ವಿ.ಎಸ್. ಮಣಿ
ಕಾರ್ಯದರ್ಶಿ



ವಿ. ಅರುಣ್
ಸಹ ಕಾರ್ಯದರ್ಶಿ


ಟಿ.ಎನ್. ರವಿಕಿರಣ್
ಕಾರ್ಯದರ್ಶಿ


ಎಸ್. ಸತ್ಯನಾರಾಯಣ
ಖಜಾಂಚಿ


ಕೆ.ಜಿ. ವೆಂಕಟೇಶ್


ಕೆ. ಗುಂಡಪ್ಪ


ಕೆ.ಜಿ.ಎಸ್. ಶರ್ಮ


ಟಿ.ಎಸ್. ರಮೇಶನ್


ಸರಸ್ವತಿ ನಟರಾಜ್


ಕೆ.ಮಂಜುನಾರಾಯಣ್


ಟಿ.ಪಿ.ಸೂರ್ಯನಾರಾಯಣ್


ಜಿ. ಸುಬ್ರಹ್ಮಣ್ಯಂ



ಆರ್. ಗಣೇಶ್ ಶ್ರೀಧರ್


ಟಿ.ಎಸ್. ನಾಗೇಶ್


ಬಿ.ಆರ್.ಶಂಕರ್ ಪ್ರಸಾದ್


ನಿತಿನ್ ಭಾಸ್ಕರ್


ಅರುಣ್ ಸೇತುರಾಂ


ಕೆ.ಸಿ. ನಟರಾಜ್
ಸಂಪಾದಕ-ಬೃಹಚ್ಚರಣ


ಲಲಿತಾ ರಮೇಶ್
ಉಪ ಸಂಪಾದಕಿ

# 2017–18ರ ಸರ್ವ ಸದಸ್ಯರ ಸಭೆಯ ಒಂದು ಪಕ್ಷಿ ನೋಟ

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ 2017–2018ರ ಸರ್ವ ಸದಸ್ಯರ ಸಭೆಯು ದಿನಾಂಕ 22.7.2018ರಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಮಂಗಳ ಸದನದಲ್ಲಿ ನಡೆಯಿತು.

ಕುಮಾರಿ ಅಮೃತವರ್ಷಿಣಿಯವರ ಪ್ರಾರ್ಥನೆ ಯೊಂದಿಗೆ ಪ್ರಾರಂಭವಾದ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಎಸ್.ಸೋಮಸುಂದರರವರು ವಹಿಸಿ ನೆರೆದ ಅತಿಥಿ ಅಭ್ಯಾಗತರನ್ನು, ಗೌರವಾನ್ವಿತ ಹಿರಿಯ ಚೇತನರನ್ನು, ಪ್ರತಿಭಾ ಪುರಸ್ಕೃತರನ್ನು ಬೃಹಚ್ಚರಣ ಭಾಷೆಯಲ್ಲಿ ಸ್ವಾಗತಿಸಿ, ಸಂಘ ಬೆಳೆದು ಬಂದ ರೀತಿಯನ್ನು ವಿವರವಾಗಿ ತಿಳಿಸಿ, ಸಂಘವು ಮುಂದೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಅಧ್ಯಕ್ಷರು ವಿವರವಾಗಿ ವಿವರಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್.ಕೆ. ಶಶಿಧರ್‌ರವರು ಈ ವರ್ಷದಲ್ಲಿ ನಮ್ಮನ್ನಗಲಿದ ನಮ್ಮವರ ಹೆಸರುಗಳನ್ನು ಸ್ಮರಿಸಿದರು, ಸಭೆಯಲ್ಲಿ ಅಗಲಿದ ಚೇತನರಿಗೆ ಒಂದು ನಿಮಿಷದ ಮೌನ ಶ್ರದ್ಧಾಂಜಲಿ ಸಲ್ಲಿಸಿದರು.

ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್.ಮಣಿಯವರು ಸಂಘದ ಕಾರ್ಯಚಟುವಟಿಕೆಗಳನ್ನು ವಿವರಿಸುತ್ತಾ, ವಾರ್ಷಿಕ ಪ್ರವಾಸ, ಸತ್ಯನಾರಾಯಣ ಪೂಜೆ, 50 ವರ್ಷ ದಾಂಪತ್ಯ ಪೂರೈಸಿದ ಹಿರಿಯ ದಂಪತಿಗಳಿಗೆ ಸನ್ಮಾನ ಸಮಾರಂಭ, ಶಂಕರ ಜಯಂತಿ ಕಾರ್ಯಕ್ರಮದ ಬಗ್ಗೆ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸುತ್ತಾ, ಸಮುದಾಯದ ಯುವಕರು ಸದಸ್ಯರಾಗಬೇಕೆಂದು ಹಾಗೂ ಈಗಾಗಲೇ ಸದಸ್ಯರಾಗಿರುವವರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ಸಂದಾಯ ಮಾಡಬೇಕೆಂದು ವಿನಂತಿಸಿದರು.

'ಬೃಹಚ್ಚರಣ' ತ್ರೈಮಾಸಿಕ ಪತ್ರಿಕೆಯ ಆಕಾರ, ವಿನ್ಯಾಸ ಬದಲಾಗಿರುವುದನ್ನು ಸಮರ್ಥಿಸುತ್ತಾ, ಸದಸ್ಯರ ಉತ್ತಮ ಸಲಹೆಗಳನ್ನು ಸಂಘವು ಅಳವಡಿಸಿಕೊಳ್ಳಲಾಗುವುದೆಂದು ತಿಳಿಸಿ, ಉತ್ತಮ ಲೇಖನಗಳನ್ನು ಪ್ರಕಟಣೆಗಾಗಿ ಕಳುಹಿಸುವಂತೆ ಕೋರಿದರು. 'ಬೃಹಚ್ಚರಣ' ಪತ್ರಿಕೆಯ ಮೂಲಕ ಸಂಘಕ್ಕೂ, ಸದಸ್ಯರಿಗೂ ಉತ್ತಮ ಬಾಂಧವ್ಯ ಏರ್ಪಡ ಬೇಕೆಂದು ಆಶಿಸಿದರು.

ಹಿಂದಿನ ಸಾಲಿನ ಆಯವ್ಯಯ ಪತ್ರವನ್ನು ಸಂಘದ ಖಜಾಂಚಿ ಶ್ರೀ ಎಸ್. ಸತ್ಯನಾರಾಯಣರವರು ಮಂಡಿಸಿದ್ದು, ಅದನ್ನು ಸರ್ವ ಸದಸ್ಯರೂ ಸರ್ವಾನುಮತದಿಂದ ಕೈ ಎತ್ತುವ ಮೂಲಕ ಅನುಮೋದಿಸಿದರು. ಸಂಘದ ಸದಸ್ಯರಾದ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರು ಲೆಕ್ಕ ಪರಿಶೋಧನೆಯ ಸೇವೆ ನೀಡುತ್ತಿರುವುದಕ್ಕೆ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು.

ನೂತನ ಕಾರ್ಯಕಾರಿ ಸಮಿತಿಯ ನೇಮಕಾತಿಯಾಗ ಬೇಕಿದ್ದುದರ ವಿಷಯದ ಬಗ್ಗೆ ಸಂಘದ ಪೋಷಕರಾದ ಶ್ರೀ ಬಿ.ಎನ್.ಜಿ.ಪ್ರಸಾದ್‌ರವರು ಸಭೆಯಲ್ಲಿ ಮಂಡಿಸಿದರು. ಹೊಸದಾಗಿ ನಾಮಪತ್ರ ಸಲ್ಲಿಸಿದ ಶ್ರೀ ನಿತಿನ್ ಭಾಸ್ಕರ್ ಮತ್ತು ಶ್ರೀ ಕೆ.ಎಸ್. ಅರುಣ್ ಸೇತುರಾಮ್‌ರವರ ಹೆಸರನ್ನು ಸದಸ್ಯರು ಕೈ ಎತ್ತುವ ಮೂಲಕ ಸಮ್ಮತಿ ವ್ಯಕ್ತಪಡಿಸಿದರು.

ಸಮುದಾಯದ 75 ವರ್ಷದ ಹಿರಿಯರನ್ನು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ರವಿಕಿರಣ್‌ರವರು ಸಭೆಗೆ ಪರಿಚಯಿಸಿದರು. ಹಿರಿಯ ಮಹಿಳೆಯರಿಗೆ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜನ್ ರವರು ಹಾಗೂ ಹಿರಿಯ ಮಹನೀಯರನ್ನು ಕಾರ್ಯಕಾರಿ ಸಮಿತಿ ಹಿರಿಯ ಸದಸ್ಯರಾದ ಶ್ರೀಯುತ ಕೆ.ಜಿ. ವೆಂಕಟೇಶ್, ಕೆ. ಗುಂಡಪ್ಪ, ಕೆ.ಬಿ.ಎಸ್.ಶರ್ಮ ಮತ್ತು ಎಸ್.ಸಿ. ಶ್ರೀನಿವಾಸ್ ರವರು ಶಾಲು, ಮುತ್ತಿನ ಮಾಲೆ, ನೆನಪಿನ ಕಾಣಿಕೆ, ಗೌರವಪತ್ರ ನೀಡಿ ಸಂಘದ ಪರವಾಗಿ ಗೌರವಿಸಿದರು.

ಬೃಹಚ್ಚರಣ ಸಂಘದ ಪ್ರತಿ ಕಾರ್ಯಕ್ರಮದಲ್ಲೂ ಭಾಗಿಯಾಗಿ ಛಾಯಾಚಿತ್ರಣ, ವಿಡಿಯೋ ಚಿತ್ರೀಕರಿಸಿ ಮತ್ತು ಛಾಯಾಚಿತ್ರಗಳನ್ನು ಪರಿಷ್ಕರಿಸಿ ಕೊಡುತ್ತಿರುವ ಸಂಘದ ಸದಸ್ಯ ಶ್ರೀ ಎನ್. ಶಿವಕುಮಾರ್‌ರವರನ್ನು ಮತ್ತು ಸಂಘದ ಏಳಿಗೆಗಾಗಿ ಶ್ರಮಿಸುತ್ತಿರುವ ಪೋಷಕ ಸದಸ್ಯ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರನ್ನು ಕಾರ್ಯಕಾರಿ ಸಮಿತಿ ಉಪಾಧ್ಯಕ್ಷರಾದ ಶ್ರೀ ಶಶಿಧರ್ ಮತ್ತು ಸಹ ಕಾರ್ಯದರ್ಶಿ ಅರುಣ್‌ರವರು ಸಂಘದ ಪರವಾಗಿ ಪುರಸ್ಕರಿಸಿ ಶುಭಾಶಯ ಕೋರಿದರು.

ಸಮುದಾಯದ ಪ್ರತಿಭಾ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ಮತ್ತು ಸ್ವಪ್ನ ಬುಕ್ ಹೌಸ್ ಗಿಫ್ಟ್ ವೋಚರನ್ನು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಯುತ ನಿತಿನ್ ಭಾಸ್ಕರ್, ಎಸ್.ಸಿ.ಶ್ರೀನಿವಾಸ್, ಎಸ್.ಸತ್ಯನಾರಾಯಣ್ ಮತ್ತು ಸಂಘದ ಮಹಾಪೋಷಕರಾದ ಶ್ರೀ ಶ್ರೀಕಂಠೇಶ್ವರ್ ರವರು ಪ್ರೋತ್ಸಾಹ ಪೂರ್ವಕವಾಗಿ ನೀಡಿದರು.

ಸಂಘದ ಸದಸ್ಯರಾದ ಶ್ರೀ ಹೆಚ್.ಪಿ. ಶ್ರೀನಿವಾಸ್‌ರವರು ಕ್ಯಾಲೆಂಡರ್ ಬಗ್ಗೆ, ಬಿ.ಶೇಷಾಚಲರವರು ಸಂಘದ ಕಾರ್ಯ ಚಟುವಟಿಗೆಗಳ ಬಗ್ಗೆ, ಶ್ರೀ ಆರ್. ರಮೇಶ್‌ರವರು 'ಬೃಹಚ್ಚರಣ' ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಲೇಖನಗಳ ವಿಷಯ–ವಿವರಗಳನ್ನು ಸರಿಯಾಗಿ ಎಸ್.ಎಂ.ಎಸ್. ಅಥವಾ ವಾಟ್ಸಾಪ್, ಇಮೇಲ್‌ಗಳ ಮೂಲಕ ಕಳಿಸಬೇಕೆಂದು ಮನವಿ ಮಾಡಿದರು. ಸದಸ್ಯ ವಿನಾಯಕ ಪ್ರಸಾದ್‌ರವರು ಬೃಹಚ್ಚರಣ ಭಾಷೆಯಲ್ಲಿ ಸಂಘದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು. ಹಿರಿಯ ಸದಸ್ಯರಾದ ಶ್ರೀ ಬಿ.ಎಸ್. ಪದ್ಮನಾಭ್ ರವರು ಮಾತನಾಡಿ ಬ್ರಾಹ್ಮಣ ಸಮುದಾಯದ ಪರಿವಾರಗಳಲ್ಲಿ ಮೃತ್ಯು ಸಂಭವಿಸಿದಲ್ಲಿ ತತ್‌ಕ್ಷಣದ ಉತ್ತರಕ್ರಿಯೆಗಳಿಗೆ ಅನುಕೂಲವಾಗುವಂತೆ 'ವೈದಿಕಧರ್ಮ' ಸಹಾಯವನ್ನು ನೀಡುತ್ತಿರುವ ಸಂಸ್ಥೆಯೊಂದಕ್ಕೆ 'ಬೃಹಚ್ಚರಣ ಸಂಘ'ದ ವತಿಯಿಂದ 'ವೈಕುಂಠವಾಹನ' ಒಂದನ್ನು ಕೊಡುಗೆಯಾಗಿ ನೀಡುವ ಬಗ್ಗೆ ಸಲಹೆ ನೀಡಿದರು. ಹಿರಿಯ ಸದಸ್ಯ ಶ್ರೀ ಬಿ.ಎಸ್. ಸೂರ್ಯನಾರಾಯಣ್ ಮತ್ತು ಸಂಘದ ಸದಸ್ಯ ಮತ್ತು ಲೆಕ್ಕ ಪತ್ರ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಕುಮಾರ್‌ರವರು ಈ ಮೇಲಿನ ಸಲಹೆಗೆ ತಮ್ಮ ಬೆಂಬಲ–ಅನುಮೋದನೆ ಸೂಚಿಸಿದರು.

ಪೋಷಕಿ ಶ್ರೀಮತಿ ಅಂಜನಿ ನಂದಕುಮಾರ್‌ರವರು ಸಂಘಕ್ಕೆ ರೂ. 1,00,000/– ಗಳನ್ನು ಚಟುವಟಿಕೆಗಳಿಗಾಗಿ ನೀಡಿರುತ್ತಾರೆ.

ಅಧ್ಯಕ್ಷರಾದ ಶ್ರೀ ಎಸ್. ಸೋಮಸುಂದರರವರು ಹಿರಿಯ ಸದಸ್ಯರ ಸಲಹೆಗಳನ್ನು ಗಮನದಲ್ಲಿರಿ ಮುಂದೆ ಕೃತಗೂಡಲಿದೆ ಎಂದು ಅಧ್ಯಕ್ಷರ ಭಾಷಣದಲ್ಲಿ ತಿಳಿಸಿ, ಸಭೆಗೆ ವಂದನೆ ಸಲ್ಲಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಅನಂತ್ ರವರು ನಮ್ಮವರೇ ಆದ ದಾರ್ಶನಿಕ ಪೂಜ್ಯ ಡಿ.ವಿ.ಜಿ. ಯವರ 'ಹೊಸ ಚಿಗುರು ಹಳೇ ಬೇರು' ಕಗ್ಗದೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ಸಭೆಯ ನಂತರ ಭೋಜನಾ ವ್ಯವಸ್ಥೆ ಏರ್ಪಡಿಸಲಾಗಿತ್ತು.



◆ **ಲಲಿತಾ ರಮೇಶ್**
**9945199637**

## ನಾಲ್ಕು 'ಗ' ಕಾರಗಳ ಮಹಿಮೆ

**'ಗೀ'ತಾ 'ಗಂ'ಗಾಚ ಗಾಯತ್ರೀ 'ಗೋ'ವಿಂದೇತಿ ಹೃದಿಸ್ಥಿತೇ ।**
**ಚತುರ್ಗಕಾರ ಸಂಯುಕ್ತೇ ಪುನರ್ಜನ್ಮನ ವಿದ್ಯತೇ ॥**

ಗೀತಾ, ಗಂಗಾ, ಗಾಯತ್ರಿ ಮತ್ತು ಗೋವಿಂದ ಎಂಬ ಈ ನಾಲ್ಕು 'ಗ' ಕಾರಗಳನ್ನು ಸದಾ ಮನಸ್ಸಿನಲ್ಲಿ ಭಕ್ತಿಯಿಂದ ಧ್ಯಾನ ಮಾಡುವ ಪುಣ್ಯಾತ್ಮನಿಗೆ ಪುನರ್ಜನ್ಮವು ಇರುವುದಿಲ್ಲ.

1) **ಗೀತಾ** – ಎಂದರೆ ಭಗವದ್ಗೀತೆ. ಪಂಚಮವೇದವೆಂದೇ ಪ್ರಸಿದ್ಧವಾಗಿರುವ ಶ್ರೀ ಮನ್ಮಹಾಭಾರತದ ಹೃದಯ, ಭಗವದ್ಗೀತೆ. ಸಕಲ ವೇದಶಾಸ್ತ್ರ ಪುರಾಣಗಳ ಸಾರಸಂದೇಶ ಭಗವದ್ಗೀತೆ. ಶ್ರೀಕೃಷ್ಣ ಭಗವಂತನ ನೇರವಾದ ಉಪದೇಶಾಮೃತ ಭಗವದ್ಗೀತೆ. ದುಃಖಸಾಗರ ನಿಮಗ್ನನಾದ ಅರ್ಜುನನಿಗೆ ಆತ್ಮಜ್ಞಾನೋಪದೇಶದ ಮೂಲಕ ಶಾಂತಿ ಆನಂದಗಳನ್ನು ವರ್ಷಿಸಿದ ಅಮೃತಧಾರೆ, ಭಗವದ್ಗೀತೆ.

2) **ಗಂಗಾ** – ಸ್ವರ್ಗಲೋಕದ ಪವಿತ್ರನದಿ ಗಂಗಾ, ಭಗೀರತನ ತಪಸ್ಸಿಗೆ ಮೆಚ್ಚಿ ಭೂಮಿಗೆ ಹರಿದ ಮಹಾನದಿ ಗಂಗಾ, ಮಹಾವಿಷ್ಣುವಿನ ಪಾದಗಳಿಂದ ಶುದ್ಧಳಾದ ಮಹಾನದಿ ಹಾಗೂ ಪರಮೇಶ್ವರನ ಜಟೆಯಿಂದ ಪವಿತ್ರಳಾಗಿ ಹರಿದ ಪಾವನ ನದಿ ಗಂಗಾ, ನೂರಾರು ಸಹಸ್ರಾರು ತಪಸ್ವಿಗಳಿಂದ ಸನ್ಯಾಸಿಗಳಿಂದ, ಜ್ಞಾನಿಗಳಿಂದ ನಿತ್ಯವೂ ಸೇವಿಸಲ್ಪಡುತ್ತಿರುವ ಸರ್ವ ಪಾಪ ಪರಿಹಾರಿಣೀ ಗಂಗಾನದಿ, ಹಿಮಾಲಯದ ತಪೋ ಭೂಮಿಯನ್ನೂ ಭಾರತ ರಾಷ್ಟ್ರವನ್ನೂ ಪವಿತ್ರಗೊಳಿಸಿರುವ ಪುಣ್ಯನದಿ, ಗಂಗಾನದಿ.

3) **ಗಾಯತ್ರಿ ಮಂತ್ರ** – ಸಕಲ ವೇದಗಳ ಸಾರವೇ ಗಾಯತ್ರಿ ಮಂತ್ರ. ಸಪ್ತಕೋಟಿ ಮಂತ್ರರಾಜವೆಂದೇ ಪ್ರಸಿದ್ಧವಾಗಿರುವ ಗಾಯತ್ರಿ ಮಂತ್ರವು ಸಕಲ ಸಂಪತ್ತುಗಳನ್ನು ಉಂಟು ಮಾಡುತ್ತದೆ. ತ್ರೈವರ್ಣಿಕರಿಗೆ ಪ್ರಪ್ರಥಮವಾಗಿ ಜನ್ಯವಾದ ಶ್ರೇಷ್ಠ ಮಂತ್ರ, ಗಾಯತ್ರಿ ಮಂತ್ರ.

4) **ಗೋವಿಂದ** – ಎಂದರೆ ಧೇನು ಪ್ರಿಯನಾದ ಗೋಪಾಲನಾದ ಶ್ರೀಕೃಷ್ಣ ಸರ್ವಧರ್ಮ ಸಮನ್ವಯಕಾರಕನಾಗಿ ಲೋಕಕಲ್ಯಾಣವನ್ನು ಮಾಡುವ ಸರ್ವ ಪ್ರಿಯನಾದ ದೇವತೆಯೇ ಗೋವಿಂದ.

ಈ 'ಗ' ಕಾರಗಳನ್ನು ಸ್ಮರಿಸುವವನಿಗೆ ಪುನರ್ಜನ್ಮವಿಲ್ಲ.

◆ **ಎಸ್. ಶ್ರೀನಿವಾಸಯ್ಯ**
**7899318098**

ವಿಶೇಷ ಲೇಖನ



# ಬಿ.ಜಿ.ಎಲ್.ಸ್ವಾಮಿ ಜನ್ಮಶತಮಾನೋತ್ಸವ

ಬೃಹಚ್ಚರಣ ಸಮುದಾಯದ ದಾರ್ಶನಿಕರಾದ ಪೂಜ್ಯ ಡಿ.ವಿ.ಗುಂಡಪ್ಪನವರ ಮತ್ತು ಭಾಗೀರಥಮ್ಮನವರ ಸುಪುತ್ರರಾದ ಡಾ॥ ಬಿ.ಜಿ.ಎಲ್.ಸ್ವಾಮಿಯವರು ದಿನಾಂಕ 5.2.1918ರಂದು ಜನಿಸಿದರು. ಅತೀ ಚಿಕ್ಕ ಪ್ರಾಯದಲ್ಲೇ ಮಾತೃ ವಿಯೋಗವಾಯಿತು. ಅಕ್ಕಂದಿರಾದ ತಂಗಮ್ಮ ಮತ್ತು ಇಂದಿರಾ (ತಾಯಮ್ಮ)ರವರೊಂದಿಗೆ ಸ್ವಾಮಿಯವರು ಬೆಳೆದರು. ಕೋಲಾರ ಜಿಲ್ಲೆಯ ಮುಳುಬಾಗಿಲುನವರಾದ ಇವರು ಬೆಂಗಳೂರಿನ ಬಸವನಗುಡಿಯಲ್ಲಿ ವಾಸವಾಗಿದ್ದರು. ಬಿ.ಜಿ.ಎಲ್.ಸ್ವಾಮಿಯವರಿಗೆ ಪ್ರಾಣಿಶಾಸ್ತ್ರದ ಬಗ್ಗೆ ಆಸಕ್ತಿ ಇದ್ದರೂ ಹಿರಿಯ ಸಾಹಿತಿ ಶ್ರೀಯುತ ಎ.ಆರ್.ಕೃಷ್ಣಶಾಸ್ತ್ರಿ ಯವರ ಸಲಹೆಯಂತೆ ಸಸ್ಯಶಾಸ್ತ್ರವನ್ನು ಆರಿಸಿಕೊಂಡರು. ಈ ಕ್ಷೇತ್ರದ ಬಗ್ಗೆ ಹೆಚ್ಚು ಒಲವಿರದಿದ್ದರೂ ಕ್ಷೇತ್ರದಲ್ಲೇ ಮುಂದುವರೆದು ನಮ್ಮ ದೇಶದ ಶ್ರೇಷ್ಠ ಸಸ್ಯಶಾಸ್ತ್ರಜ್ಞ ಎಂದು ಹೆಸರು ಗಳಿಸಿದರು. ಸೆಂಟ್ರಲ್ ಕಾಲೇಜಿನಲ್ಲಿ 1939ರಲ್ಲಿ ಬಿ.ಎಸ್.ಸಿ (ಆನರ್ಸ್) ಪದವಿ ಗಳಿಸಿದರು. ಕೆಲಸಕ್ಕೆ ಸೇರುವ ಹಂಬಲವನ್ನು ತಂದೆಯಲ್ಲಿ ತಿಳಿಸಿದಾಗ ಪೂಜ್ಯ ಡಿ.ವಿ.ಜಿ. ಯವರು ತಮ್ಮ ಮನೆಯಲ್ಲೇ ಸಂಶೋಧನೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟರು. ಮುಂದೆ ಸಂಶೋಧನಾ ಸಹಾಯಕರಾಗಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಇನ್ಸ್‌ಟಿಟ್ಯೂಟ್ ಆಫ್ ವುಡ್ ಸೈನ್ಸ್‌ನಲ್ಲಿ ಕಾರ್ಯ ನಿರ್ವಹಿಸಿದರು.

ಇಸವಿ 1947ರಲ್ಲಿ ಡಾ. ಎಂ.ಶಿವರಾಮ್‌ರವರ **"ಕೊರವಂಜಿ"** ಪತ್ರಿಕೆಯಲ್ಲಿ ಇವರ ಬರಹ ಪ್ರಕಟವಾಗಿದ್ದು, ಇವರಿಗೆ ಬರವಣಿಗೆ ಬಗ್ಗೆ ಚಿಕ್ಕಂದಿನಿಂದಲೂ ಇದ್ದ ಆಸಕ್ತಿಯನ್ನು ತೋರಿಸುತ್ತದೆ.

ಹೀಗೆ ಮನೆಯಲ್ಲೇ ಸಂಶೋಧನೆ ಪ್ರಾರಂಭವಾಗಿ ಮುಂದೆ ಸಸ್ಯಗಳ (ಸೀತಾಳೆ ಗಿಡಗಳು) ಭ್ರೂಣ ರಚನೆಯ ಬಗ್ಗೆ ಅಧ್ಯಯನ ನಡೆಸಿ, ಹಲವಾರು ವೈಜ್ಞಾನಿಕ ಪ್ರಬಂಧ ಗಳನ್ನು ಮಂಡಿಸಿದರು. 1947ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ತಮ್ಮ 29ನೇ ವಯಸ್ಸಿನಲ್ಲಿ ಪ್ರಬಂಧ ಸಲ್ಲಿಸಿ ಡಿ.ಎಸ್.ಸಿ (ಡಾಕ್ಟರ್ ಆಫ್ ಸೈನ್ಸ್) ಪದವಿ ಗಳಿಸಿದರು. ಈ ಸಂಶೋಧನೆಯಿಂದ ಶ್ರೀಯುತರ ನಾಮ ವಿಶ್ವವಿಖ್ಯಾತವಾಯಿತು. ಈ ಸಂದರ್ಭದಲ್ಲಿ ಡಿ.ವಿ.ಜಿ. ಯವರ ಒತ್ತಾಯಕ್ಕೆ ಮಣಿದು ವಸಂತರನ್ನು ಅತ್ಯಂತ ಸರಳ ರೀತಿಯಲ್ಲಿ ವಿವಾಹವಾದರು.

ನಂತರ ಮದ್ರಾಸಿನಲ್ಲಿ ಪೂಲ್ ಆಫೀಸರ್ ಆಗಿ ಸೇರಿದರು. 1953ರಿಂದ 1976ರವರೆಗೆ ಮದ್ರಾಸಿನ ಪ್ರಸಿದ್ಧ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಪ್ರಾರಂಭಿಸಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು. ಮುಂದೆ ಅದೇ ಕಾಲೇಜಿನಲ್ಲಿ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ಪ್ರಾಚಾರ್ಯರಾಗಿಯೂ ಕಾರ್ಯನಿರ್ವಹಿಸಿದರು. ಶ್ರೀಯುತರ ಪ್ರತಿಭೆಯನ್ನು ಗುರುತಿಸಿ ವಿಶ್ವದ ಪ್ರಖ್ಯಾತ ಹಾರ್ವರ್ಡ್ ವಿಶ್ವವಿದ್ಯಾಲಯದಿಂದಲೂ ಆಹ್ವಾನ ಬಂದಿತ್ತು. ಅಲ್ಲಿ ಹೆಸರಾಂತ ಸಸ್ಯಶಾಸ್ತ್ರಜ್ಞ ಪ್ರೊಫೆಸರ್ ಇರ್ವಿಂಗ್ ವಿಡ್‌ಮರ್ ಬೈಲಿಯವರ ಬಳಿ ಸಹ ಸಂಶೋಧಕ ಮತ್ತು ಸಹಾಯಕ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. ಇವರ ಕಾರ್ಯಕ್ಷಮತೆಯನ್ನು ಕಂಡು ಪ್ರೊಫೆಸರ್ ಬೈಲಿಯವರು ತಮ್ಮ ಪ್ರಗತಿ ವರದಿಯಲ್ಲಿ **"ನನ್ನ 40 ವರ್ಷದ ವೃತ್ತಿ ಜೀವನದಲ್ಲಿ ಸ್ವಾಮಿಯವರಂತಹ ಅತ್ಯಂತ ಸಮರ್ಥ ಶಾಲಿಯನ್ನು ಕಂಡಿಲ್ಲ"** ಎಂದು ತಿಳಿಸಿದ್ದರು. ಶ್ರೀಯುತರು ಸಸ್ಯಶಾಸ್ತ್ರದಲ್ಲಿಯೇ ಅಲ್ಲದೆ ಪ್ರಾಣಿಶಾಸ್ತ್ರ, ವಿಕಾಸ ವಿಜ್ಞಾನ, ಚರಿತ್ರೆ, ಪ್ರಾಚ್ಯವಸ್ತುಶಾಸ್ತ್ರ, ಶಾಸನಗಳ ಅಧ್ಯಯನ, ಸಾಹಿತ್ಯ, ಧರ್ಮಶಾಸ್ತ್ರ, ತತ್ತ್ವಶಾಸ್ತ್ರ ಹೀಗೆ ಹಲವಾರು ವಿವಿಧ ರೀತಿಯ ವಿಷಯಗಳಲ್ಲಿ ಪರಿಶ್ರಮ, ಪರಿಣಿತಿಯನ್ನು ಹೊಂದಿದ್ದರು. ಹಾಗೇಯೇ ಚಿತ್ರಕಲೆ, ವ್ಯಂಗ್ಯಚಿತ್ರ, ಸಂಗೀತ, ನೃತ್ಯ, ಕಸೂತಿ ಮತ್ತು ರಂಗೋಲಿಗಳಲ್ಲೂ ತಮ್ಮ ಛಾಪು ಮೂಡಿಸಿದ್ದರು. ಕೆಲವೇ ವ್ಯಕ್ತಿಗಳಿಗೆ ತಿಳಿದಿಂತೆ ಇವರು ವಯೋಲಿನ್ ವಾದನವನ್ನು ಮಾಡುತ್ತಿದ್ದರು.

ಒಬ್ಬ ವ್ಯಕ್ತಿ ಆಸಕ್ತಿ ಮತ್ತು ಸತತ ಪ್ರಯತ್ನದಿಂದ ಕಲಿಕೆಯ ವ್ಯಾಪ್ತಿಯನ್ನು ಹೇಗೆ ವಿಸ್ತರಿಸಿಕೊಳ್ಳಬಹುದು ಎಂಬುದಕ್ಕೆ ಡಾ॥ ಬಿ.ಜಿ.ಎಲ್.ಸ್ವಾಮಿಯವರು ದೊಡ್ಡ ಉದಾಹರಣೆ. ಏಕೆಂದರೆ ಇವರಿಗೆ ಕನ್ನಡ, ಇಂಗ್ಲೀಷ್, ತೆಲುಗು, ತಮಿಳು, ಸಂಸ್ಕೃತ ಭಾಷೆಗಳಲ್ಲದೆ ವಿದೇಶೀ ಭಾಷೆಗಳಾದ ಫ್ರೆಂಚ್, ಜರ್ಮನ್, ಲ್ಯಾಟಿನ್ ಮತ್ತು ರಷ್ಯನ್ ಭಾಷೆಗಳೂ ತಿಳಿದಿದ್ದವು. ಇವರ ಭಾಷಾ ಪರಿಣಿತಿ ಹೇಗಿತ್ತೆಂದರೆ ಫ್ರೆಂಚ್ ಮತ್ತು ಜರ್ಮನ್ ಭಾಷೆಯಲ್ಲೂ ವೈಜ್ಞಾನಿಕ ಪ್ರಬಂಧ ಗಳನ್ನು ರಚಿಸಿದ್ದರು.

*ಮುಂದಿನ ಪುಟದಲ್ಲಿ*

ಡಾ. ಬಿ.ಜಿ.ಎಲ್.ಸ್ವಾಮಿಯವರು ತಮ್ಮ ವೃತ್ತಿ ಜೀವನ ವನ್ನು ಪಾಠಗಳಿಗೆ ಸೀಮಿತಗೊಳಿಸದೆ ವಿದ್ಯಾರ್ಥಿಗಳನ್ನು ಸಂಶೋಧನೆಗಾಗಿ ವಿವಿಧ ಕಾಡುಗಳಿಗೆ ಕರೆದೊಯ್ಯುತ್ತಿದ್ದರು. ಆಡಳಿತ ವ್ಯವಸ್ಥೆಯ ಬಗ್ಗೆಯೂ ಹೆಚ್ಚಿನ ಜ್ಞಾನ ಹೊಂದಿದ್ದ ಸ್ವಾಮಿಯವರು ಸರ್ಕಾರದಿಂದ ಹಲವಾರು ಅನುಮೋದನೆ, ಅನುದಾನವನ್ನು ಪಡೆಯಲು ತಮ್ಮ ಕಾರ್ಯಕ್ಷಮತೆ ಯನ್ನು ಬಳಸುತ್ತಿದ್ದರು.

ಇವರು ಪಾಠಗಳಿಗೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ವಿಶೇಷವೇನೆಂದರೆ ಇವುಗಳಲ್ಲಿ ಹಾಸ್ಯವನ್ನು ಮಿಶ್ರಣ ಮಾಡಿ ಅಭ್ಯಾಸಿಸುವವರಿಗೆ ಪಾಠಗಳಲ್ಲಿ ಆಸಕ್ತಿ ಹೆಚ್ಚಿಸುವಂತೆ ಮಾಡುತ್ತಿದ್ದರು. ಸ್ವಾಮಿಯವರ ಮೊದಲ ಪುಸ್ತಕಗಳನ್ನು ಹೆಸರಿಸುವುದಾದರೆ ಪ್ರಣಯ ಪ್ರಸಂಗ, ಪ್ಲಾಟಿಪಸ್ (ಪದ್ಯರೂಪ), ಜೇಡನ ಚರಕ, ಹಸಿವಿನ ಬಳ್ಳಿ, ಕದಂಬ, ಸಂತಾನ ರಹಸ್ಯ. ಸೃಜನಶೀಲ ಕೃತಿಗಳಾದ ಮೈಸೂರು ಡೈರಿ, ನನ್ನ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ, ಅಮೇರಿಕಾದಲ್ಲಿ ನಾನು, ಪಂಚಕಳಶ ಗೋಪುರ, ಪ್ರಾಧ್ಯಾಪಕನ ಪೀಠದಲ್ಲಿ, ಫಲಶೃತಿ, ಬೃಹದಾರಣ್ಯಕ, ತಮಿಳು ತಲೆಗಳ ನಡುವೆ, ಇನ್ನೂ ಮುಂತಾದವು.

ಇವರ ಅತ್ಯಂತ ಪ್ರಸಿದ್ಧ ಕೃತಿಯಾದ 'ಹಸಿರು ಹೊನ್ನು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. 1975ರ ಲೆನಿನ್‌ಗಾರ್ಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಸ್ಯಶಾಸ್ತ್ರ ಸಭೆಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. 1976ರಲ್ಲಿ ಬೀರಬಲ್ ಸಹಾನಿ ಬಂಗಾರದ ಪದಕ ಗಳಿಸಿದ್ದಲ್ಲದೆ ಡಾ. ಬಿ.ಜಿ.ಎಲ್.ಸ್ವಾಮಿಯವರನ್ನು ಸಸ್ಯಶಾಸ್ತ್ರದ ಅಂಗರಚನಾಶಾಸ್ತ್ರ ಮತ್ತು ಭ್ರೂಣಶಾಸ್ತ್ರದಲ್ಲಿ ಅಂತರ ರಾಷ್ಟ್ರೀಯ ಪರಿಣಿತ ಎಂದು ಪರಿಗಣಿಸಲಾಗಿತ್ತು. ಅಲ್ಲದೆ ಅವರು 300ಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ಪ್ರಮುಖ ವಿಜ್ಞಾನ ಪತ್ರಿಕೆಗಳಿಗಾಗಿ ಬರೆದಿದ್ದರು.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಗಾದೆಯಂತೆ ಡಾ. ಬಿ.ಜಿ.ಎಲ್. ಸ್ವಾಮಿ ಕನ್ನಡ ಚಲನಚಿತ್ರರಂಗದಲ್ಲೂ ತಮ್ಮ ಅಸ್ತಿತ್ವವನ್ನು ಅಚ್ಚುಗೊಳಿಸಿದ್ದಾರೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಕುರಿತಾದ ಮಾರ್ಮಿಕ ಹಾಸ್ಯದಿಂದ ಕೂಡಿದ್ದ ಇವರ ಕೃತಿಯಾದ ಕಾಲೇಜು ರಂಗ ಸಿನಿಮಾಗೆ ಸಂಭಾಷಣೆ ರಚಿಸಿದ್ದಾರೆ. ಇದನ್ನು ದಿವಂಗತ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ್ದರು.

ಜ್ಞಾನಪೀಠ ಪ್ರಶಸ್ತಿ ವಿಜೇತ ರಾಷ್ಟ್ರಕವಿ ಕುವೆಂಪುರವರು ಮತ್ತು ಬಿ.ಜಿ.ಎಲ್.ಸ್ವಾಮಿಯವರು ಇಬ್ಬರೂ ಶಾಸ್ತ್ರಗಳನ್ನು ಸುಲಭದಲ್ಲಿ ಒಪ್ಪುತ್ತಿರಲಿಲ್ಲ, ಹೆಚ್ಚಿನ ತರ್ಕ, ವೈಜ್ಞಾನಿಕ ಚಿಂತನೆಯಲ್ಲಿ ನಂಬಿಕೆ, ಕನ್ನಡಕ್ಕೆ ಇಂಗ್ಲಿಷ್ ವೈಜ್ಞಾನಿಕ ಪದಗಳ ನೇರ ಬಳಕೆ, ವಿಶ್ವ ಮಾನವ ಧರ್ಮ ಮತ್ತು ಸರಳ ವಿವಾಹದ ವಿಷಯಗಳಲ್ಲಿ ಸಾಮ್ಯತೆ ಇತ್ತು.

ಮನ್ನಣೆ ಬಯಸದ, ಸಂಕೋಚ ಸ್ವಭಾವದ ಸ್ವಾಮಿ ಯವರನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕರಿಸಲು ಸಾಹಿತಿ ಡಾ. ಹಾ.ಮಾ.ನಾಯಕರೇ ಕರೆತಂದಿದ್ದರು.

ಡಾ. ಬಿ.ಜಿ.ಎಲ್.ಸ್ವಾಮಿಯವರು ದಿನಾಂಕ 2.11.1980 ರಂದು ಮೈಸೂರಿನಲ್ಲಿ ನಮ್ಮನ್ನಗಲಿದರು. ಸಾರ್ಥಕ ಜೀವನಕ್ಕೆ ಸಾಕ್ಷಿಯಾಗಿದ್ದ ಶ್ರೀಯುತರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅವರನ್ನು ನೆನೆಯುವ ಅವಕಾಶ ಕಲ್ಪಿಸಿದ ಬೃಹಚ್ಚರಣ ಪತ್ರಿಕೆಗೆ ಧನ್ಯವಾದಗಳು. ಈಗಿನ ಯುವ ಜನತೆಗೆ ಒಂದು ಕಿವಿಮಾತು ಹೇಳುವುದಾದರೆ ವೃತ್ತಿ ಶಿಕ್ಷಣವೇ ಅಲ್ಲದೆ ಬೇರೆ ಕ್ಷೇತ್ರಗಳಲ್ಲೂ ಅದರಲ್ಲೂ ಅನ್ವಯಿಕ ವಿಜ್ಞಾನದಲ್ಲೂ ಸಾಧನೆ ಮಾಡಬಹುದು ಎಂಬುದಕ್ಕೆ ನಮ್ಮವರೇ ಆದ ಶ್ರೀಯುತರು ಪ್ರತ್ಯಕ್ಷ ಮಾರ್ಗದರ್ಶಿ ಯಾಗಿದ್ದಾರೆ.



◆ **ಆರ್. ರಮೇಶ್**
**9886034048**

## ಓದುಗರ ಪತ್ರ



**ಹೆಚ್.ಪಿ. ಶ್ರೀನಿವಾಸ್‌ರವರಿಗೆ ನಮಸ್ಕಾರ,**

ತಾವು ನಮ್ಮ 'ಬೃಹಚ್ಚರಣ' ವಾರ್ತಾಸಂಚಿಕೆಯು ಆಕಾರದಲ್ಲಿ ಚಿಕ್ಕದಾದರೂ, ಆಕರ್ಷಕ ವಿನ್ಯಾಸದೊಂದಿಗೆ ಹೊರಬಂದಿರುವುದಕ್ಕೆ ತಮ್ಮ ಕುಟುಂಬದೊಂದಿಗೆ ಸಂತೋಷ ವ್ಯಕ್ತಪಡಿಸಿರುತ್ತೀರಿ. ಅಕ್ಷರಗಳು ಹಾಗೂ ಛಾಯಾಚಿತ್ರ ವಿವರವಾಗಿ ಕಾಣಿಸುವಂತಿದ್ದರೆ ಸಂತೋಷ ಎಂದು ತಿಳಿಸಿರುವಿರಿ. ತಮ್ಮ ಸಲಹೆ ಗಮನದಲ್ಲಿರುತ್ತದೆ. ತಾವು ಸಂಘದ ಮೇಲಿಟ್ಟಿರುವ ವಿಶ್ವಾಸಕ್ಕೆ ಕಾರ್ಯಕಾರಿ ಸಮಿತಿ ಪರವಾಗಿ ಧನ್ಯವಾದ.

**ಶ್ರೀಮತಿ ಕೆ.ಎಲ್. ಶಾಂತ ಅವರಿಗೆ ನಮಸ್ಕಾರ,**

'ಬೃಹಚ್ಚರಣ' ಸಂಚಿಕೆ ಚಿಕ್ಕದಾಗಿ, ಚೊಕ್ಕದಾಗಿ ಪ್ರಕಟಿಸಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ ಕೆಲವು ಲೇಖನಗಳ ಅಕ್ಷರಗಳು ಸಣ್ಣದಾಗಿದೆ, ಚಿತ್ರಗಳು ಸ್ವಲ್ಪ ದೊಡ್ಡದಾಗಿ ಅಚ್ಚಾದರೆ ಉತ್ತಮ ಎಂದು ತಿಳಿಸಿರುವಿರಿ. ತಮ್ಮ ಭಾವನೆಗೆ ಸ್ಪಂದಿಸುತ್ತೇನೆ.

**–ಸಂಪಾದಕ**



# ಇಂದಿನ ಶಿಕ್ಷಣ ಪದ್ಧತಿ

**ಮ**ನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ನಂಬಿಕೆಯನ್ನು ಹೊತ್ತು ಬೆಳೆದ ನಮಗೂ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅಭ್ಯಸಿಸುತ್ತಿರುವ ಇಂದಿನ ಪೀಳಿಗೆಗೂ ಇರುವ ವ್ಯತ್ಯಾಸ ಬಗ್ಗೆ ಒಂದು ಸಣ್ಣ ವಿಮರ್ಶೆ.

ಈ ಲೇಖನ ಬರೆಯಲು ಸ್ಫೂರ್ತಿ ಇಂದಿನ ಮಕ್ಕಳು. ಇತ್ತೀಚೆಗೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಒಂದು ಪುಟ್ಟ ಕಾರ್ಯಕ್ರಮವನ್ನು ನಮ್ಮ ಕಟ್ಟಡದಲ್ಲಿ ನಡೆಸಿದೆವು. ಆಶ್ಚರ್ಯಕರ ವಿಷಯವೆಂದರೆ, ಇಂದಿನ ಮಕ್ಕಳಲ್ಲಿ ಕಂಡ ಕೆಲವು ವಿಪರ್ಯಾಸದ ನಡವಳಿಕೆಗಳನ್ನು ಕಂಡು ನಿಜಕ್ಕೂ ಮನ ನಡುಗಿತು. ಕಾರಣ, ಮಕ್ಕಳಲ್ಲಿ ನಮ್ಮಲ್ಲಿದ್ದಂತಹ ಕ್ರೀಡಾ ಮನೋಭಾವ ಇಲ್ಲವೇ ಇಲ್ಲ. ಇದಕ್ಕಿಂತ ಅಗತ್ಯವಾದ ಆತ್ಮ ವಿಶ್ವಾಸವೂ ಇಲ್ಲ, ಅವರ ನಡವಳಿಕೆಯಲ್ಲಿ ಅತ್ಯಂತ ಎದ್ದು ಕಾಣುವ ಗುಣವೆಂದರೆ, ಅಹಂಕಾರ ಮತು ಅವಶ್ಯಕತೆಗೂ ಮೀರಿದ ಋಣಾತ್ಮಕ ಧೋರಣೆ. ಯಾವ ಕಾರಣಕ್ಕಾಗಿ ಈ ಬದಲಾವಣೆ? ಎಲ್ಲಿಂದ ಬಂತು! ಈ ರೀತಿಯ ಬದಲಾವಣೆಗೆ ಯಾರು ಹೊಣೆ? ಇದನ್ನೆಲ್ಲಾ ಯೋಚಿಸಿದಾಗ ನನಗೆ ಅರಿವಾದಂತೆ ಈ ಸಮಸ್ಯೆಯ ಮೂಲ ನಾವು ನಮ್ಮ ಮಕ್ಕಳಿಗೆ ನೀಡಿರುವ/ನೀಡುತ್ತಿರುವ ಶಿಕ್ಷಣ ರೀತಿ.

ಇಂದಿನ ಶಿಕ್ಷಣ ಪದ್ಧತಿ ತಪ್ಪೆಂದು ನಾನು ಹೇಳುತ್ತಿಲ್ಲ. ಆದರೆ, ಅದನ್ನು ಗ್ರಹಿಸುತ್ತಿರುವ ವಿಧ ಸ್ವಲ್ಪ ಬದಲಾದರೆ ಉತ್ತಮ ಎಂದು ನನ್ನ ಅಂಬೋಣ. ಶಾಲೆಗೆ ಹೊರಟ ಮಗು ಆ ದಿನ ಮುಗ್ಧನಾಗಿ, ನಿರ್ಭಾವವಾಗಿ ಮತ್ತು ಆತಂಕ ಭರಿತ ಮನಸ್ಥಿತಿಯಲ್ಲಿ ಮನೆಯಿಂದ ಹೊರಟು ತನಗೆ ಅರಿವಿಲ್ಲದ ಒಂದು ಹೊಸ ಲೋಕಕ್ಕೆ ಕಾಲಿಡುತ್ತಾನೆ. ಆದರೆ ಹೊರಬರುವ ವೇಳೆಗೆ ಹೊಸರೂಪ ತಳೆದು ಬರುತ್ತಾನೆ. ನಾವುಗಳೂ ಸಹ ಮಕ್ಕಳಲ್ಲಿ ಆಗಿರುವ ಆ ಬದಲಾವಣೆಯನ್ನು ಸರಿಯೆ ತಪ್ಪೇ ಎಂದು ಯೋಚಿಸದೆ, ನಮ್ಮಷ್ಟಕ್ಕೆ ನಾವೇ ಅದನ್ನ ನಮ್ಮದೇ ಆದ ರೀತಿಯಲ್ಲಿ ಆನಂದಿಸುತ್ತಾ ಹೋಗಿಬಿಡುತ್ತೇವೆ. ಆದರೆ ಅದು ತಪ್ಪು ಅಥವಾ ಅನ್ಯಮಾರ್ಗ ಎಂದು ಅರಿವಾಗುವ ವೇಳೆಗೆ ಸರಿಪಡಿಸಲಾಗದಷ್ಟು ನಷ್ಟ ಆಗಿಹೋಗಿರುತ್ತದೆ.

ಇಂದಿನ ತಂದೆತಾಯಂದಿರಲ್ಲಿ ಕಳಕಳಿಯ ಪ್ರಾರ್ಥನೆ ಎಂದರೆ, ನಿಮ್ಮ ಮಕ್ಕಳನ್ನು ಅವರ ವಯಸ್ಸಿಗೆ ಅನುಗುಣವಾಗಿ ಬೆಳೆಯಲು ಬಿಡಿ, ನಿಮ್ಮ ಪ್ರತಿಷ್ಠೆ, ಮನಸ್ಥಿತಿ, ನಿಮ್ಮ ಘನತೆಗೆ ತಕ್ಕಂತೆ ಮಕ್ಕಳು ಬೆಳೆಯಬೇಕು ಎಂಬ ಮಾನದಂಡ ಬಿಟ್ಟು ಮಗುವನ್ನು ಮಗುವಾಗಿರಲು ಬಿಡಿ. ಈ ರೀತಿಯಲ್ಲಿ ನಾನು ಬರೆಯಲು ಕಾರಣವೆಂದರೆ, ಇತ್ತೀಚೆಗೆ ನಡೆಸಲಾದ ಸಮೀಕ್ಷೆಯ ಪ್ರಕಾರ ಇಂದಿನ ಮಕ್ಕಳಲ್ಲಿ ಬಾಲ್ಯ ಉಳಿದೇ ಇಲ್ಲ, ಇದು ನಿಜವಾಗಿಯೂ ಘಾಸಿ ತರುವ ಆತಂಕಪಡುವ ವಿಷಯವಲ್ಲವೆ? ಸಮೀಕ್ಷೆಯ ಪ್ರಕಾರ ಇಂದಿನ ಮಕ್ಕಳು, ಅವಶ್ಯಕತೆಗೂ ಮೀರಿ, ವಯಸ್ಸಿಗೆ ಮುಂಚಿತವಾಗಿ ಪ್ರೌಢಾವಸ್ಥೆಗೆ ಬಂದು ಬಿಡುತ್ತಿದ್ದಾರೆ, ಅವರಲ್ಲಿ ಆ ಮುಗ್ಧತೆ, ಎಳೆತನ ಅಥವಾ ತುಂಟಾಟ ಕಾಣೆಯಾಗಿದೆ. ಕಾರಣ ಹಲವಾರು, ಆದರೆ, ಮುಖ್ಯವಾದ ಅಂಶವೆಂದರೆ, ಪೋಷಕರಾದ ನಮ್ಮ ಜವಾಬ್ದಾರಿ. ಅದೇನೆಂದರೆ, ನಮ್ಮ ಮಕ್ಕಳಲ್ಲಿ, ಅವರ ತನವನ್ನು ಉಳಿಸುವುದು, ನಮ್ಮ ಸಂಪ್ರದಾಯವನ್ನು ನಾವು ಅನುಸರಿಸುವುದು, ನಮ್ಮ ಕುಟುಂಬದ, ನಮ್ಮ ಸಮುದಾಯದ ಪರಿಚಯವನ್ನು ಸೂಕ್ತ ರೀತಿಯಲ್ಲಿ ನೀಡುವುದು. ಅದಕ್ಕಿಂತ ಅಗತ್ಯವಾಗಿ ನಮ್ಮ ಮಕ್ಕಳೊಂದಿಗೆ ನಿತ್ಯದ ಕೆಲವು ಸಮಯವನ್ನು ವ್ಯಯಿಸಿದರೆ, ನಾವು ಹೆಚ್ಚಿನ ದುರಂತವನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ನಾವು ನಿರ್ವಹಿಸಬೇಕಾದ ಮುಖ್ಯ ಜವಾಬ್ದಾರಿ ಎಂದರೆ, ಇಂದಿನ ಶಿಕ್ಷಣದಲ್ಲಿ ಅಂಕಗಳ ಹಿಂದೆ ಓಡುವುದನ್ನು ಬಿಟ್ಟು ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಮತ್ತು ಅವರಲ್ಲಿರುವ ಕಲಾತ್ಮಕತೆಯನ್ನು ಮೇಲೆತ್ತುವುದು. ಇದನ್ನು ಸಾಧಿಸಿದಲ್ಲಿ ಇದಕ್ಕಿಂತ ಹೆಚ್ಚಿನ ಬದಲಾವಣೆ ಬೇಡವೆಂದು ಭಾವಿಸುತ್ತೇನೆ.



◆ ರವಿಕಿರಣ್.ಟಿ.ಎನ್.
**9972677005**





**ಕನಕಪುರದ ಕೋಟೆ ಶ್ರೀ ವಿದ್ಯಾವಿನಾಯಕ ದೇವಸ್ಥಾನದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಶ್ರೀ ಪ್ರಶಾಂತ ಮತ್ತು ಮಾ। ಆದಿತ್ಯ ರಾಂ – ( 17–09–2018)**



# ಭಕ್ತಿಯ ಪರಾಕಾಷ್ಟತೆ

ಒಮ್ಮೆ ಶ್ರೀ ಕೃಷ್ಣ ಮತ್ತು ಅರ್ಜುನರು ವಿಹಾರಕ್ಕೆಂದು ಸ್ನೇಹದಿಂದ ಮಾತನಾಡುತ್ತಾ ವನದಲ್ಲಿ ಸುತ್ತಾಡುತ್ತಾ ಇದ್ದರು. ದೂರದಲ್ಲಿ ಒಬ್ಬ ಸಾಧು ಕೋಪದಿಂದ ದೊಡ್ಡ ಕತ್ತಿಯನ್ನು ಮಸೆಯುತ್ತಿದ್ದನು. ಕೃಷ್ಣನು ಅರ್ಜುನನಿಗೆ ಸಾಧು ವೇಷದಲ್ಲಿರುವವನು ಕತ್ತಿ ಮಸೆಯುತ್ತಿರುವುದನ್ನು ಅಲ್ಲಿ ನೋಡು, ನೀನು ವಿಚಾರಿಸಿ ಬಾ, ನಾನು ವಿಶ್ರಾಂತಿ ಪಡೆಯುವೆ ಎಂದನು. ಅರ್ಜುನನು ವೇಗದಿಂದ ಸಾಧು ಬಳಿ ಬಂದು, ನಿನ್ನ ವೇಷಕ್ಕೂ ಈ ಆವೇಷಕ್ಕೂ ಅರ್ಥವಿಲ್ಲ. ಯಾಕೆ ಹೀಗೆ ಕತ್ತಿ ಮಸೆಯುತ್ತಿರುವೆ? ಎಂದ. ಆಗ ಸಾಧು ಹೇಳಿದ. ನಾನು ದೈವ ಭಕ್ತ. ನನ್ನ ಆರಾಧ್ಯ ದೇವರಿಗೆ ಹಿಂಸೆಯಾದರೆ ನಾನು ಸುಮ್ಮನಿರುವುದಿಲ್ಲ. ನನಗೆ ನಾಲ್ಕು ಶತೃಗಳಿದ್ದಾರೆ. ಅವರನ್ನು ವಧೆಗೈಯಲು ಕತ್ತಿ ಮಸೆಯುತ್ತಿರುವೆ ಎಂದ. ಅರ್ಜುನನಿಗೆ ಕುತೂಹಲ ತಡೆಯಲಾಗದೆ ಈ ನಾಲ್ಕು ಶತೃಗಳು ಯಾರೆಂದು ಹೇಳುವಿರಾ? ಎಂದ. ಅದಕ್ಕೆ ಸಾಧು ಈ ರೀತಿ ಹೇಳಿದ:

ಮೊದಲನೆಯವನು ಆ ಧೃವ. ಸಾಂಸಾರಿಕ ಜಗಳ, ಮಲತಾಯಿ ಧೋರಣೆ ಮತ್ತು ಸಿಂಹಾಸನದಿಂದ ದೂಡಲ್ಪಟ್ಟಿದ್ದಕ್ಕೆ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನನ್ನು ಕರೆಯಬಹುದೆ? ಅವನೇನು ಇವನ ಗೆಳೆಯನೆ? ಅದ್ದರಿಂದ ಈ ಕತ್ತಿ ಮಸೆತ.

ಎರಡನೆಯವ ಯಾರೋ ಪ್ರಹ್ಲಾದನಂತೆ. ಅದೂ ಅಷ್ಟೆ. ಹರಿಯ ಕುರಿತು ತಂದೆ ಮಗನ ಮನಸ್ತಾಪದ ಬಗ್ಗೆ ತಾವೇ ನಿರ್ಧಾರ ಮಾಡಬಹುದಿತ್ತು. ಆ ಸುಂದರ ಮನ್ಮಥ ಜನಕನನ್ನು ವಿಕಾರವಾಗಿಸಿ 'ನರಸಿಂಹ' ರೂಪದಿಂದ ಘೋರವಾಗಿ ಕಾಣುವಂತೆ ಮಾಡಿದ. ಅವನು ನನ್ನ ಎರಡನೆಯ ಗುರಿ. ಅರ್ಜುನನು ಇದು ಯಾವುದೂ ನನಗೆ ಸಂಬಂಧವಿಲ್ಲ. ಇವನ ತಲೆ ಕೆಟ್ಟಿರಬೇಕು ಎಂದು ತನ್ನ ಮನಸ್ಸಿನಲ್ಲಿಯೇ ಚಿಂತಿಸಿದ. ಮೂರನೆಯವ ಯಾರು ಎಂದು ಕೇಳಿದ. ಅದಕ್ಕೆ ಸಾಧು ನಿನಗೆ ಎಲ್ಲಾ ಹೇಳಬೇಕಾ? ಎಂದು ಹೀಗೆ ಮುಂದುವರೆಸಿದ.

ಮೂರನೆಯವಳು ಆ ದ್ರೌಪದಿ ಎಂದ. ಇದು ಯಾಕೋ ಹತ್ತಿರಕ್ಕೆ ಬರುತ್ತಿದೆ ಎಂದು ಅರ್ಜುನನು ಯೋಚಿಸಿ, "ಅವಳೇನು ತಪ್ಪು ಮಾಡಿದಳು"? ಎಂದ. "ಅದೂ ಸಹಾ ದಾಯಾದಿಗಳ ಮಾತ್ಸರ್ಯ, ಜಗಳಕ್ಕೆ ಕುಲವಧುವನ್ನು ಸಭೆಯಲ್ಲಿ ಸೀರೆ ಎಳೆದು ಅವಮಾನಗೈದರು. ಅವಳ ಪತಿಗಳು ಐವರಿದ್ದರೂ ಸಹಾಯವಿಲ್ಲದೆ ನನ್ನ ಅಂತರಂಗದ ಶ್ರೀ ಕೃಷ್ಣದೇವರನ್ನು ಕರೆದಳು. ಆ ಮಹಾಮಹಿಮ ಸೀರೆ ಅಂಗಡಿ ಇಟ್ಟಿದ್ದನೆ? ಇದು ನನ್ನ ಸ್ವಾಮಿಗೆ ಮಹಾ ಅವಮಾನ. ಅವಳನ್ನೂ ಬಿಡುವುದಿಲ್ಲ" ಎಂದ ಕೋಪದಿಂದ.

ಪಾರ್ಥನಿಗೆ ಗಂಟಲು ಒಣಗಲು ಶುರುವಾಯಿತು. ಆದರೂ ನಾಲ್ಕನೆಯವನನ್ನು ಕೇಳಿಬಿಡೋಣ ಎಂದು ಯಾರು ಸ್ವಾಮಿ ನಾಲ್ಕನೆಯ ಶತ್ರು ಎಂದ.

ಆಗ ಸಾಧುವು ಅವನೇ ನನ್ನ ದೊಡ್ಡ ಶತೃ. ಮೂವರನ್ನು ಕ್ಷಮಿಸಿದರೂ ನಾಲ್ಕನೆಯವನನ್ನು ಖಂಡಿತ ಬಿಡುವುದಿಲ್ಲ–ಅವನೇ ಅರ್ಜುನನಂತೆ. ಮೂರು ಲೋಕದ ಗಂಡು, ಎಡಬಲ ಕರಗಳಲ್ಲಿ ಏಕಕಾಲಕ್ಕೆ ಬಾಣ ಪ್ರಯೋಗ ಮಾಡುವವ ಎಂದು ಬಿರುದುಗಳು ಅವನಿಗೆ. ಅವನೇ ನನ್ನ ಪೂಜ್ಯ ದೇವರನ್ನು ಬಂಡಿ ಓಡಿಸಲು ಹೇಳಿದ ದ್ರೋಹಿ. ಅವನೇ ಜಗದ ಒಡೆಯನನ್ನು ಪಾರ್ಥ ಸಾರಥಿಯನ್ನಾಗಿ ಮಾಡಿದ. ಏನೆಂದು ತಿಳಿದ ನನ್ನ ಕೃಷ್ಣ ದೇವರನ್ನು? ಎಂದು ಗುಡುಗಿ ಕತ್ತಿ ಝಳಪಿಸಿದ. ಒಂದೇ ಸಮನೆ ಪ್ರಾಣ ಭಯದಿಂದ ಓಟ ಕಿತ್ತ ಅರ್ಜುನನ್ನು ಕಂಡ ಮುಗುಳು ನಗೆಯ ಮುಕುಂದ ವಿಚಾರಿಸಿದೆಯಾ ಆ ಸಾಧುವನ್ನು? ಎಂದ. ಅರ್ಜುನನಿಗೆ ಗಂಟಲು ಒಣಗಿ ಮಾತನಾಡಲು ಆಗಲಿಲ್ಲ. ಆದರೆ ಮನದಲ್ಲಿ ದೈವ ಭಕ್ತಿ ಜಾಗೃತವಾಗಿತ್ತು. ಕೃಷ್ಣ ಅರ್ಜುನನ ಅಹಂಕಾರವನ್ನು ಮುರಿಯಲು ಈ ಲೀಲೆಯನ್ನು ನಡೆಸಿದ.



◆ ಭ್ರಮರಾ ಗೋಪಿನಾಥ್
26677574

## ಮೂರ್ಖ......?

ಸರ್ವ ಜೀವಿಗಳೂ ಸ್ವತಂತ್ರವಲ್ಲ. ಭವ ಬಂಧನದಲ್ಲಿ ಸಿಕ್ಕಿ ತೊಳಲಾಡುತ್ತಿರುತ್ತದೆ. ಬಂಧನಗಳು ಮೂರು; ಕಾಮ, ಕಾಲ, ಕರ್ಮ. ಈ ಮೂರು ಕಕಾರಗಳಿಂದ ಬಂಧನ. ಅದಕ್ಕೆ "ಮೂರ್ಖ" ಎನ್ನುವುದು. ಆದರೆ ಈ ಕಲಿಗಾಲದಲ್ಲಿ ಶತಮೂರ್ಖತೆಗಳಿವೆ. ಶ್ರೀ ವಾಗ್ದೇವಿ ಕೃಪೆಯಿಂದ ಜ್ಞಾನ ಪ್ರಾಪ್ತಿಯಾದಲ್ಲಿ ಪಾರಾಗಬಹುದು. ಅದಕ್ಕೆ ಶ್ರೀ ಸದ್ಗುರು ಉಪದೇಶ, ಮಂತ್ರಾನು ಸಂಧಾನದಿಂದ ಮಾತ್ರ ಸಾಧ್ಯ.

# ಮರುಕಳಿಸಿದ ನೆನಪುಗಳು

ಬೆಳಗ್ಗೆ ಎದ್ದೊಡನೇ ಟೂತ್ ಪೇಷ್ಟ್, ಬ್ರಶ್ ಬೇಕಿರಲಿಲ್ಲ. ಸೌದೆ ಒಲೆಯ ಬೂದಿ ಅಥವ ಬಚ್ಚಲು ಮನೆಯ ಚಿಕ್ಕ ಮಡಕೆಯಲ್ಲಿ ಇಟ್ಟಿದ್ದ ಉಪ್ಪು, ಇದ್ದಿಲು ಜೊತೆ ಬೆರೆಸಿದ ಬತ್ತದ ಹೊಟ್ಟಿನ ಬೂದಿ ಸಾಕಾಗಿತ್ತು. ಮನೆ ಮಂದಿಯೆಲ್ಲಾ ಒಂದೇ ಸಾಬೂನು ಉಪಯೋಗಿಸ್ತಾ ಇದ್ವಿ, ಯಾವ ರೋಗಾನೂ ಬರ್ತಾ ಇರ್ಲಿಲ್ಲ.

ಅಂಗಡಿಗೆ ಚೀಟಿ ಕೊಟ್ಟು, ಹಳೆಯ ನ್ಯೂಸ್ ಪೇಪರ್‌ನಲ್ಲಿ ಪೊಟ್ಟಣ ಕಟ್ಟಿಕೊಟ್ಟ ಸಾಮಾನು ತರುತ್ತಿದ್ದೆವು. ಕ್ಯಾರಿ ಬ್ಯಾಗ್ ಅಂದ್ರೆ ಗೊತ್ತಿರಲಿಲ್ಲ. ತರಕಾರಿ, ದಿನಸಿಸಾಮಾನು ತರಲು ಬಟ್ಟೆ ಚೀಲ ಇತ್ತು. ಅದು ಹಳೆಯ ಪ್ಯಾಂಟ್‌ನ, ಕಾಲುಗಳನ್ನು ಕತ್ತರಿಸಿ ಹಿಡಿ ಹಾಕಿ ತಯಾರಿಸಿದ್ದ ಬ್ಯಾಗ್. ಕೆಲವೊಮ್ಮೆ ಅದಕ್ಕೆ ರಾಗಿಯ ಹೊಟ್ಟು ತುಂಬಿಸಿದರೆ, ಅದೇ 'ತಲೆ ದಿಂಬು' ಆಗ್ತಾ ಇತ್ತು. ಯಾವಾಗ್ಲೋ ಒಂದು ದಿನ ಮಾಡುತ್ತಿದ್ದ ವಿಶೇಷ ತಿಂಡಿ ಪೊಳ್ಳುಂಗಾಯಿ ಉಂಡೆ, ಮನೋಹರದ ಉಂಡೆ, ಚಕ್ಕುಲಿ, ಅವರೇಕಾಯಿ ಕೋಡುಬಳೆ ರುಚಿ ಈಗ ಇಲ್ಲ.

ಆಲೇಮನೆಗೆ ಹೋಗಿ ಸವಿಯುತ್ತಿದ್ದ ಕಬ್ಬಿನ ರಸ, ಬಿಸಿಬಿಸಿ ಬೆಲ್ಲ, ಕಬ್ಬಿನ ತುಂಡಿಗೆ ಸುತ್ತಿದ ಜೋನೀ ಬೆಲ್ಲದ ರುಚಿ ಈಗಿಲ್ಲ. ಬೆಲ್ಲ, ಕ್ಯಾಂಡಿ, ಕಮ್ಮರ್ ಕಟ್, ಶುಂಟಿ ಪೆಪ್ಪರ್ ಮಿಂಟ್, ಬತ್ತಾಸು, ಸಕ್ಕರೆ ಕಡ್ಡಿ, ಕಲ್ಯಾಣಸೇವೆ ತಿಂದಿದ್ದು ಯಾವಾಗಲೋ ಮರೆತು ಹೋಯ್ತು. ಕಲ್ಯಾಣಸೇವೆ ಒಳಗೆ ಇದ್ದ ಕಡಲೆ ಪೊಪ್ಪು (ಹುರಿಗಡಲೆ ತುಂಡು) ಹೇಗೆ ಒಳಗೆ ಇಟ್ಟರೋ? ಎಂಬ ಪ್ರಶ್ನೆಗೆ ಉತ್ತರ ಗೊತ್ತಿರಲಿಲ್ಲ.

ಅಪ್ಪ ಯುಗಾದಿ, ದೀಪಾವಳಿ ಹಬ್ಬಕ್ಕೆ ತರುತ್ತಿದ್ದ ಬಟ್ಟೆಯ ಸಂಭ್ರಮ ಇವತ್ತಿನ ಮಾಲ್‌ನಲ್ಲಿ ಸಿಗುತ್ತಿಲ್ಲ. ಮನೆಯ ಎಲ್ಲ ಮಕ್ಕಳಿಗೂ ಒಂದೇ ತರಹದ ಡಿಝೈನ್ ಬಟ್ಟೆಗಳು ಬರುತ್ತಿತ್ತು. ಪಟ್ಟಾ ಪಟ್ಟಿ ನಿಕ್ಕರ್ ಗ್ಯಾರೆಂಟಿ. ಯುಗಾದಿ, ದೀಪಾವಳಿ ಹಬ್ಬಗಳಂದು ಹರಳೆಣ್ಣೆ, ಸೀಗೇಕಾಯಿ ಪುಡಿಯ ಅಭ್ಯಂಜನ ಸ್ನಾನ ತಪ್ಪಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಆ ಸೌದೆ ಒಲೆಯ ತಾಮ್ರದ ಹಂಡೆಯಲ್ಲಿ ಕಾದ ಬಿಸಿ ನೀರು ಈಗೆಲ್ಲಿ.?

ಮನೆಯ ಓವರ್ ಹೆಡ್ ವಾಟರ್ ಟ್ಯಾಂಕ್ ಅಂದ್ರೆ ಗೊತ್ತಿರಲಿಲ್ಲ, ಹಾಗಾಗಿ ಮನೆಯಲ್ಲಿ ನಲ್ಲಿಯೂ ಇಲ್ಲ, ನಲ್ಲಿಯ ನೀರು ಗೊತ್ತಿರಲಿಲ್ಲ. ಸಿಮೆಂಟ್ ತೊಟ್ಟಿಲಿ ಯಾವಾಗ್ಲೂ ನೀರು ತುಂಬಿಸಿ ಇಡೋದೆ ದೊಡ್ಡ ಕೆಲಸ. ಕುಡಿಯುವ ಸಿಹಿ ನೀರಿಗೆ ಒಂದು ಮೈಲಿ ನಡೆದು ಹೋಗಿ ಊರ ಹೊರಗಿನ ಬಾವಿಯಿಂದ ನೀರು ತರಬೇಕಿತ್ತು. ನೀರು ಸೇದುವುದು ಒಳ್ಳೆಯ ವ್ಯಾಯಮವಾಗಿತ್ತು, ಬೋರ್‌ವೆಲ್ ಕಂಡಿರಲಿಲ್ಲ.

ಕಾದಂಬರಿ ಓದೋರ ಒಂದು ಬಳಗವೇ ಇರುತ್ತಿತ್ತು. ಓದಿದ ಪುಸ್ತಕಗಳ ವಿನಿಮಯ ಆಗ್ತಾ ಇತ್ತು. ತ್ರಿವೇಣಿಯವರ ಕಾದಂಬರಿಗಳನ್ನು ಓದಿ ಪಾತ್ರಗಳ, ಕಥೆಯ ವಿವರಣೆಯನ್ನು ಹಂಚಿಕೊಂಡು ಚರ್ಚೆ ಮಾಡ್ತಾ ಇದ್ದದ್ದು ಮಜ ಇರ್ತಾ ಇತ್ತು. ಕಿತ್ತಿಗಾನಹಳ್ಳಿಯ ನಾಗಾರಾಧನೆ, ಊರ ಜಾತ್ರೆ, ಪಲ್ಲಕ್ಕಿ, ನಾಟಕಗಳು, ಗುಮ್ಮಳಾಪುರದ ಗೌರಮ್ಮನ ಜಾತ್ರೆ, ವೆಂಕಟಕೃಷ್ಣಯ್ಯನವರ ಮನೆಯ ಹಿತ್ತಲಲ್ಲಿ ಕುಸ್ತಿ ಪಂದ್ಯ ಇವುಗಳಿಗಿಂತ ದೊಡ್ಡ ಪ್ರೋಗ್ರಾಮ್ ಇರಲೇ ಇಲ್ಲ.

ಅಜ್ಜಿ, ತಾತನ ಮನೆ, ಗುಮ್ಮಳಾಪುರಕ್ಕೆ ಹೋದ್ರೆ, ಕರೇದಾರ್ ಮನೆಯ ಗಿರೀಶ್ವರಯ್ಯನವರು ಮನೆಯ ಜಗಲಿಯಲ್ಲಿ ಕುಳಿತು, ಯಾರೇ ಬಂದರೂ ಪ್ರೀತಿ, ಆತ್ಮೀಯತೆಯಿಂದ "ಓಹೋಹೋ, ವಾರಂಗೊ ವಾರಂಗೋ" ಅಂತ ಬರಮಾಡಿಕೊಳ್ಳುತ್ತಿದ್ದ ದೃಶ್ಯ ಈಗಲೂ ಕಣ್ಣು ಕಟ್ಟಿದಂತಿದೆ. ಅವರ ಮನೆ ಜಗಲಿ ಕಟ್ಟೆಯಿಂದ ಕಣ್ಣು ಹಾಯಿಸಿ ನೋಡಿದ್ರೆ, ಒಂದು ಮೈಲಿ ದೂರದ ಸೋಲೂರ್ ಬಾರ್ಡರ್‌ನಲ್ಲಿ ಬರುವ ಬಸ್ ಕಾಣ್ತಾ ಇತ್ತು.

ಕಿತ್ತಿಗಾನಹಳ್ಳಿಲಿ ಇಸ್ಪೀಟು ಆಡೋಕೆ ಎಸ್. ರಾಮಯ್ಯನವರ ಮನೆಯ ಜಗಲಿಕಟ್ಟೇನೇ ಮಾಮೂಲು. ಎ.ವಿ. ಲಕ್ಷ್ಮಣಐಯ್ಯರ್, ಆರ್.ವಿ. ನಂಜುಂಡಯ್ಯ (ನಂಜು) ಸರ್ಜಾಪುರ ಲಕ್ಷ್ಮೀನಾರಾಯಣ, ಗುಮ್ಮಳಾಪುರದ ರಾಜ, ತಟ್ಟನಹಳ್ಳಿ ಟಿ.ಜಿ.ಎಸ್, ಆನೇಕಲ್ ಪಟ್ಟಾಭಿ ಜೊತೆಗೆ ಕಿತ್ತಿಗಾನಹಳ್ಳಿಯ ಟೀಂ ಇದ್ದೇ ಇತ್ತು. ಇವರೆಲ್ಲ ಶನಿವಾರ ಸಂಜೇನೆ ಬರ್ತಾ ಇದ್ರು. ರಾತ್ರಿ ಎಲ್ಲಾ 'ಇಪ್ಪತ್ತೆಂಟು" (ಟ್ವಂಟಿಎಯ್ಟ್) ಇಸ್ಪೀಟ್ ಆಟ. ಆಟಕ್ಕೆ ಆಡೋ ಕೈ (ಜನ) ಕಮ್ಮಿ ಆದ್ರೆ, ಬೊಮ್ಮಂಡಳ್ಳಿ ಯಿಂದ ಸೈಕಲ್‌ನಲ್ಲಿ ಟಿ.ಟಿ. ಅಯ್ಯರ್ ಅವರನ್ನ ಕರ್ಕೊಂಡು ಬರ್ಬೇಕಿತ್ತು. ಇವರಿಗೆಲ್ಲಾ, ರಾತ್ರಿ ಮಲಗೋಕೆ ಹಾಸಿಗೆ ರೆಡಿ ಮಾಡಿ, ಕಾಲು ಒತ್ತಬೇಕು, "ಕೊಂಚು ಮೊಳ್ಳ ನಿದಾನ್ಮೆ ಗುದ್ದಯ್ಯ" ಅಂದ್ರೆ ಬೆನ್ನು ಗುದ್ದಬೇಕು. ಮಾಡಿದ ಉಪಚಾರಕ್ಕೆ ಮಾರನೇ ದಿನ ನಾಲ್ಕಾಣೆ ಬಳುವಳಿ ಸಿಕ್ತಾ ಇತ್ತು.

ಮಳೆಗಾಲದ ಜ್ವರಕ್ಕೆ ಅಮ್ಮನ ಬೆಲ್ಲದ ಕಾಫೀ ಕಷಾಯ ಸಾಕಾಗ್ತಾ ಇತ್ತು. ಕಾಫಿಗೆ ಸಕ್ಕರೆ ಹಾಕ್ತಾ ಇದ್ದದ್ದು ನೆಂಟರು ಬಂದಾಗ ಮಾತ್ರ. ಒಂದೊಂದು ಸಾರಿ ಪಕ್ಕದ ಸೂರಪ್ಪ, ಸುಬ್ಬಮ್ಮ ಅವರ ಮನೆಯಿಂದ ಮೂರು ನಾಲ್ಕು ಚಮಚ ಕಾಫೀಪುಡಿ ಎರವಲು ಪಡೆಯೋದು ಸಾಮಾನ್ಯವಾಗಿತ್ತು.

ಸಕ್ಕರೆ ಖಾಯಿಲೆ ಆವಾಗ ಶ್ರೀಮಂತರಿಗೆ ಮಾತ್ರ. ಇತರರಿಗೆ ದುಡಿಮೆಯೇ ಅಂದಿನ ವ್ಯಾಯಾಮ, ಹಾಗಾಗಿ ಸಕ್ಕರೆ ಖಾಯಿಲೆ, ಕೊಲೆಸ್ಟರಾಲ್ ಅಂದ್ರೆ ಗೊತ್ತೇ ಇಲ್ಲ. ಎಲ್ಲ ಖಾಯಿಲೆಗೂ ಕಷಾಯವೇ ಮದ್ದು.

ಚಂದಾಪುರ, ಬೆಂಗಳೂರು ನಡುವಿನ ರಸ್ತೆಯಲ್ಲಿ ಬಿಲ್ಡಿಂಗ್ ಗಳಿಗಿಂತ ಮರಗಳೇ ಜಾಸ್ತಿ ಇದ್ದವು. ಅಲ್ಲೋ ಇಲ್ಲೋ ಒಂದೊಂದು ಲಾರಿ, ಬಸ್ಸು ಕಾಣ್ತಾ ಇತ್ತು. ಲಗೋರಿ, ಮರಕೋತಿ ಆಟ, ಚಿನ್ನಿದಾಂಡು ಕಬಡ್ಡಿ, ಹುಡುಗರಿಗೆ. ಕುಂಟೆಬಿಲ್ಲೆ, ಕೊಕೊ, ಚೌಕಾಭಾರ, ಪಲ್ಲಂಗ ಮಣೆ ಹುಡುಗಿಯರ ಆಟ ಆಗಿತ್ತು. ಸಂಜೆ ಏಳಕ್ಕೆ ಎಲ್ಲಾ ಮನೆಲಿ ಇರುತ್ತಿದ್ವಿ, ಊಟ ಮಾಡಿ, ದೀಪ ಆರಿಸಿ, ಎಂಟು ಗಂಟೆಗೆ ಎಲ್ಲರೂ ಗೊರಕೆ. ಬೇಸಿಗೆಯಲ್ಲಿ ಎಲ್ಲ ಗಂಡಸರು ಮನೆಯ ಜಗುಲಿ ಮೇಲೆ ಮಲಗುತ್ತಿದ್ದರು. ಸೊಳ್ಳೆಯ ಕಾಟ ಇದ್ದರೂ ಚಿಕನ್ ಗುನ್ಯ, ಡೆಂಗೂ ಜ್ವರದ ಹಾವಳಿ ಇರಲಿಲ್ಲ.

ಭಾನುವಾರ ಗಂಡು ಮಕ್ಕಳ 'ಹೇರ್ ಕಟ್' ಅವರವರ ಮನೆಯ ಜಗಲಿ ಮೇಲೆ ಆಗ್ತಾ ಇತ್ತು. ಭಾನುವಾರ ಮಧ್ಯಾನ್ಹ ರೇಡಿಯೋದಲ್ಲಿ ಚಲನಚಿತ್ರದ ಧ್ವನಿ ಪ್ರಸಾರ ಆಗ್ತಾ ಇತ್ತು. ಬರೀ ಡೈಲಾಗ್ ಮಾತ್ರ ಕೇಳೋದೇ ಸಾಕಾಗಿತ್ತು.

ಬೇಸಿಗೆಯ ರಜೆಯಲ್ಲಿ ವರ್ಷಕ್ಕೆ ಒಮ್ಮೆಯಾದರೂ ಬಲವಂತವಾಗಿ ಅಮ್ಮ ಹರಳೆಣ್ಣೆ ಕುಡಿಸುತ್ತಿದ್ದರು. ಅಯ್ಯೋ ರಾಮ, ಅದಕ್ಕಿಂತ ಬೇರೆ ಪನಿಷ್ಮೆಂಟ್ ಬೇಕಾ? ಅಂದು ಹಲವಾರು ಬಾರಿ ತಂಬಿಗೆಯ ನೀರಿನೊಂದಿಗೆ ಊರ ಹೊರಗಿನ ಸರ್ವೇತೋಪಿನ ಕಡೆ ಓಡಿದ್ದೇ ಓಡಿದ್ದು. ಅಂದು ಬರೀ ಮಜ್ಜಿಗೆ ಅನ್ನದ ಪಥ್ಯ. ಹುಡುಗೀರಿಗೆ ಅಮ್ಮನದ್ದೆ ಬ್ಯೂಟಿ ಪಾರ್ಲರ್, ಬೈತಲೆ ತೆಗೆಯೋದೇ ಒಂದು ವಿಶೇಷತೆ. ಹೇನು ತೆಗೆಯುವ ವಿಶೇಷವಾದ ಮರದ ಸೀರಣಿಗೆ, ಬಾಚಣಿಗೆ ಅದಕ್ಕೆಂದೇ ಇರುತ್ತಿತ್ತು. ಬಾಚಣಿಗೆಯಲ್ಲಿ ಸಿಕ್ಕಿಹಾಕಿಕೊಂಡ ಹೇನು 'ಚಿಟಿಕ್' ಅಂತ ಸಾಯ್ತಾ ಇತ್ತು.

ದೊಡ್ಡೋರ ಅಂಗಿ, ಚಡ್ಡಿ ಸಣ್ಣವರಿಗೆ ಬಳುವಳಿಯಾಗಿ ಬರುತ್ತಿತ್ತು. ಅದೇ ರೀತಿ ಪಠ್ಯ ಪುಸ್ತಕಗಳು ಸಹಾ. ಹಳೆ ನ್ಯೂಸ್ ಪೇಪರ್ ಬೈಂಡಿಗ್ ಮಾತ್ರ ಬದಲಾಗ್ತಾ ಇತ್ತು. ಮಳೆಗಾಲ ಅಂದರೆ ಬೆಳಗ್ಗೆ ಶಾಲೆಗೆ ಹೋಗುವಾಗ ಮತ್ತು ಸಂಜೆ ಬರುವಾಗ ಮಳೆ ಜೋರಾಗಿ ಹೊಡೀತ್ತಿತ್ತು ಆಮೇಲೆ ಇಡೀ ದಿನ ಜಿಟಿಜಿಟಿ ಸುರೀತಾ ಇತ್ತು.

ಇನ್ನು ಶ್ರಾವಣ ಶನಿವಾರಗಳಂದು ಶಾಲೆಗೆ ಹೋಗುವ ಮೊದಲು 'ಕೆಂಪು ನಾಮಾ' ಹಾಕಿಕೊಂಡು ಊರಿನ ನೆಂಟರ ಮನೆ, ಮನೆಗೆ ತಿರುಗಿ 'ಲಕ್ಷ್ಮೀ ವೆಂಕಟೇಶಾಯ ಮಂಗಳಂ' ಹೇಳಿ 'ಪಡಿ' ಎತ್ತುತ್ತಿದ್ದೆವು. ಶಾಲೆ ಯಿಂದ ಬರುವ ವೇಳೆಗೆ ತಂಬಿಟ್ಟು ('ಪಚ್ಚಮಾವು') ಅದರ ಜೊತೆಗೆ ನಂಜಿ ಕೊಳ್ಳಲು ಹಸಿ ಕೊಬ್ಬರಿ ಚೂರು ರೆಡಿ ಇರ್ತಾ ಇತ್ತು. ಪಡಿ ಅಕ್ಕಿ ಜೊತೆ ಕೆಲವರ ಮನೇಲಿ ಎರಡೋ ಮೂರೋ ಪೈಸೆಯ ನಾಣ್ಯ ಹಾಕಿದರೆ, ಮೆತ್ತಗೆ ಯಾರಿಗೂ ತಿಳಿಯದ ಹಾಗೆ ನಮ್ಮ ಜೇಬು ಸೇರ್ತಾ ಇತ್ತು. ಮಗ್ಗಿ ಹೇಳೋದೇ ಶಾಲೆಯ ದೊಡ್ಡ ಅಸೈನ್ಮೆಂಟೂ. ಹೋಂ ವರ್ಕ ಕಾಟ ಇದ್ದಿಲ್ಲ.

ನವರಾತ್ರಿ ರಜೆಯಲ್ಲಿ ಹೊಲಕ್ಕೆ ಹೋಗಿ ಜೀರುಂಡೆ ಹುಳು ಹಿಡಿದು ದಾರಕಟ್ಟಿ ಬೆಂಕಿಪೊಟ್ಟಣದಲ್ಲಿ ಹಾಕಿಡುವುದೇ ಒಂದು ಸಾಹಸ. ನವರಾತ್ರಿಲಿ ಸರಸ್ವತಿಯ ಹಬ್ಬ ಬರೋದೇ ಕಾಯ್ತಾ ಇದ್ವಿ. ಎಲ್ಲಾ ಪುಸ್ತಕನೂ ಪೂಜೆಗೆ ಇಟ್ರೆ, ಓದೋದು, ಬರೆಯೋ ಕೆಲಸಕ್ಕೆ ಮೂರುದಿನ ಪೂರ್ಣ ವಿರಾಮ. ಖುಷಿಯೋ ಖುಷಿ. ಇನ್ನು ಆಯುಧ ಪೂಜೆದಿನ ಬೆಳಗ್ಗೆ ತಿಂಡಿ ತಿಂದು ಕಿತ್ತಿಗಾನಹಳ್ಳಿಯ ಮೈನ್ ರೋಡ್ ಹತ್ತಿರ ಸ್ನೇಹಿತರೆಲ್ಲ ಒಟ್ಟಿಗೆ ಹೊರಗೆ ಕುಳಿತುಕೊಂಡು ಬಸ್, ಲಾರಿಗಳಿಗೆ ಕಟ್ಟಿರೊ ಬಾಳೆ ಕಂದು, ವಿವಿಧ ಹೂವ್ವಿನ ಅಲಂಕಾರ ನೋಡ್ಕೊಂಡು ಎಂಜಾಯ್ ಮಾಡ್ತಾ ಇದ್ವಿ. ಡ್ರೈವರ್‌ಗೆ 'ಟಾಟಾ' 'ಬೈಬೈ' ಹೇಳೋದೇ ಖುಷಿಯಾಗತ್ತಾ ಇತ್ತು.

ರಜೆ ದಿನಗಳಲ್ಲಿ ಎರಡು ಖಾಲಿ ಬೆಂಕಿ ಪೊಟ್ಟಣಗಳ ಮಧ್ಯದಲ್ಲಿ ಉದ್ದನೆಯ ದಾರ ಕಟ್ಟಿ ಇಬ್ಬರ ಮಧ್ಯದಲ್ಲಿನ ಸಂಭಾಷಣೆ ಎಂತಹ ಮಜ. ಅದು ನಾವೇ ಆವಿಷ್ಕರಿಸಿ ತಯಾರಿಸಿದ 'ಟೆಲಿಫೋನ್', ಕೆಲವೊಂದು ವೇಳೆ ಅದೇ ನಮ್ಮ ಮ್ಯೂಸಿಕ್ ಸಿಸ್ಟಂ ಕೂಡ.

ಅಲ್ಲೊಂದು ಇಲ್ಲೊಂದು ವಾಹನ. ಹಾಗಾಗಿ ಟ್ರಾಫಿಕ್ ಜಾಮ್ ಹೆಸರು ಕೇಳಿಯೇ ಇಲ್ಲ. ಅಂದಿನ ಸೈಕಲ್‌ನಲ್ಲಿ, ಡಬ್ಬಲ್ ರೈಡಿಂಗ್ ಸವಾರಿಯ ಮಜನೇ ಮಜ. ಯಾರಲ್ಲೂ ಹಣ ಇರ್ತಾ ಇರ್ಲಿಲ್ಲ ಹಾಗಾಗಿ ರಾಗಿಯನ್ನು ಕೊಟ್ಟು ತರಕಾರಿ, ಉಪ್ಪು ಮುಂತಾದ ಪದಾರ್ಥಗಳ ವಿನಿಮಯ (ಬಾರ್ಟರ್) ಮಾಡಿಕೊಳ್ಳುತಾ ಇದ್ದರು.

ಹಾಲು ಹಾಕುವ ಮರಿಯಪ್ಪ ಮನೇಗೇನೇ ಬರ್ತಾ ಇದ್ದ, ಅವನೊಟ್ಟಿಗೆ ಊರಿನ ಎಲ್ಲ ವಿಚಾರ ವಿನಿಮಯ ಆಗ್ತಾ ಇತ್ತು. ಎಲ್ಲಾ updates ಅವನಿಗೆ ಗೊತ್ತಾಗ್ತಾ ಇತ್ತು.

ಯಾರಿಗಾದರು ನೋವಾದರೆ ನಮಗೂ ದುಃಖ ಆಗ್ತಾ ಇತ್ತು. ಈ ಸ್ಮೈಲಿ, ಎಮೋಜಿ ಕಳುಹಿಸುತ್ತಾ ಇರ್ಲಿಲ್ಲ. ಇನ್ನು, ಬರ್ತಡೇ, ವೆಡ್ಡಿಂಗ್ ಡೇ ಶುಭಾಶಯಗಳು ಇರಲಿಲ್ಲ. ಮುಖ್ಯವಾಗಿ ಅವರಿಗೇನೇ ಜ್ಞಾಪಕ ಇರ್ತಾ ಇರ್ಲಿಲ್ಲ, ಇನ್ನು ಬೇರೆಯವರ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಮೇಯವೆಲ್ಲಿ. ಇನ್ನು ಪ್ರತಿದಿನ ಗುಡ್ ಮಾರ್ನಿಗ್ ಗುಡ್ ನೈಟ್ ಪೋಸ್ಟ್ ಗಳ ಗೋಳಿರಲಿಲ್ಲ.

ಮನೆಮಂದಿ ಪಕ್ಕದ ಮನೆಯವರು ಒಟ್ಟಿಗೆ ಜಗಲಿ ಮೇಲೆ ಕೂತು ಮಾತಾಡೋದೆ ವಾಟ್ಸಪ್ ಗ್ರೂಪ್ ಆಗಿತ್ತು. ಟಿ.ವಿ. ಧಾರಾವಾಹಿಗಳ ರಗಳೆ ಇರ್ತಾ ಇರ್ಲಿಲ್ಲ. ಹಾಗಾಗಿ, ಹಬ್ಬಗಳ ಸಾಲು ಬರುವ ಎರಡು ತಿಂಗಳ ಮೊದಲೇ ಹೆಂಗಸರು ಮಧ್ಯಾನ್ಹದ ವೇಳೆ ಜಗಲಿ ಮೇಲೆ ಕೂತು, ಹೂಬತ್ತಿ, ಗೆಜ್ಜೆ ವಸ್ತ್ರಗಳ ತಯಾರಿ, ಕೀರ್ತನೆ, ಹರಟೆ ಗಳೊಂದಿಗೆ ನಡೀತಿತ್ತು.

ಫೋಟೊ ತೆಗೆದ್ರೆ, ರೋಲ್ ಮುಗಿಯುವವರೆಗೂ ಕಾದು ನಂತರ ಸ್ಟುಡಿಯೋಗೆ ಕೊಟ್ಟು ನೆಗಟೀವ್ ಕ್ಲೀನ್ ಆಗಿ ಫೋಟೋ ಬರೋಕೆ ವಾರ, ತಿಂಗಳೇ ಕಾಯ್ತಾ ಇದ್ದೆವು. ಆಮೇಲೆ ಫೋಟೋ ಆಲ್ಬಮ್ ಒಟ್ಟಿಗೆ ಕೂತು ನೋಡೋ ಖುಷಿಯೇ ಬೇರೆ ಇತ್ತು. ಊರಿಗೊಬ್ಬರು ಫೇಸ್ ಬುಕ್ ಥರಾ ಎಲ್ಲಾ ವಿಷಯ ಮನೆಗೆ ಬಂದು ಡೌನ್ಲೋಡ್ ಅಪ್ಲೋಡ್ ಮಾಡ್ತಾ ಇದ್ದರು. ಎಲ್ಲರಿಗೂ ಇತರರ ಪರಿಚಯ ಇದ್ದೇ ಇತ್ತು. ದಿನಸಿ ಅಂಗಡಿಯವನಿಗೆ, ಶಾಲಾ ಮಾಸ್ತರಿಗೆ, ಪೋಸ್ಟ್ ಮ್ಯಾನ್ಗೆ, ಚಮ್ಮರ, ಕಮ್ಮಾರ ಎಲ್ಲರಿಗೂ ಎಲ್ಲ ಮನೆಯವರ ಪರಿಚಯ ಮತ್ತು ಎಲ್ಲಾ ವಿಷಯವೂ ತಿಳಿತಾ ಇತ್ತು.

ಕಾಲ ಬದಲಾಯ್ತೊ, ನಾವು ಬದಲಾದವೋ ಗೊತ್ತೇ ಆಗ್ಲಿಲ್ಲ...! ಆದರೆ ನೆನಪುಗಳು ಇನ್ನೂ ಡಿಲೀಟ್ ಆಗಿಲ್ಲ. ಡಿಲೀಟ್ ಆಗೊ ಮೊದಲು ಇನ್ನೊಮ್ಮೆ, ಮತ್ತೊಮ್ಮೆ ಓದಿ ಮೆಲುಹಾಕಿ ಎಂಜಾಯ್ ಮಾಡೋಣ.



◆ ವಿ.ಎಸ್.ಮಣಿ
9845055582

# 2017–18ರ ಸರ್ವ ಸದಸ್ಯರ ಸಭೆಯ ಛಾಯಾ ಚಿತ್ರಗಳು



ಅಧ್ಯಕ್ಷ ಎಸ್. ಸೋಮಸುಂದರರಿಂದ ಸ್ವಾಗತ



ಕಾರ್ಯದರ್ಶಿ ವಿ.ಎಸ್. ಮಣಿರವರಿಂದ ಪ್ರಾಸ್ತಾವಿಕ ನುಡಿ



ಖಜಾಂಚಿ ಎಸ್. ಸತ್ಯನಾರಾಯಣರವರಿಂದ ಆಯ–ವ್ಯಯ ಮಂಡನೆ



ಉಪಾಧ್ಯಕ್ಷ ಹೆಚ್.ಕೆ. ಶಶಿಧರ್‌ರವರಿಂದ ಅಗಲಿದವರಿಗೆ ಶ್ರದ್ಧಾಂಜಲಿ



ನಮ್ಮನ್ನಗಲಿದವರಿಗೆ ಮೌನ ಗೌರವಾರ್ಪಣೆ



ಸ್ವಾಗತ ಸಮಿತಿ



ಸಂಘದ ಸದಸ್ಯರು

2017–18ರ ಆಯ–ವ್ಯಯ ಮಂಡನೆಗೆ ಸರ್ವ ಸದಸ್ಯರ ಅನುಮೋದನೆ

ಚಿತ್ರ ಕೃಪೆ : ಶ್ಯಾಮಸುಂದರ್, ಎನ್. ಶಿವಕುಮಾರ್



# ಹಿರಿಯ ಚೇತನರಿಗೆ ಗೌರವಾರ್ಪಣೆ







ವಿಶೇಷ ಪುರಸ್ಕೃತರು



ಎನ್. ಶಿವಕುಮಾರ್ ಹಾಗೂ ಗೋವಿಂದ ಪ್ರಸಾದ್

## 2017-18ರ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು









## ಸರ್ವ ಸದಸ್ಯರ ಸಭೆಯಲ್ಲಿ ಹಿರಿಯ ಸದಸ್ಯರ ಸಲಹೆಗಳು




## ಪ್ರಸಾದ ಸ್ವೀಕರಿಸುತ್ತಿರುವ ಸಮುದಾಯದ ಕುಟುಂಬದವರು



## 2017–18ರ ಸರ್ವ ಸದಸ್ಯರ ಸಭೆಯ ಛಾಯಾ ಚಿತ್ರಗಳು



ಸಂಘದ ಹಿರಿಯ ಪೋಷಕ ಸದಸ್ಯರಾದ
ಶ್ರೀ ಬಿ.ಎಸ್. ಪದ್ಮನಾಭ್‌ರವರನ್ನು
ಸ್ವಾಗತಿಸುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರು



ಸರ್ವಸದಸ್ಯರ ಸಭೆಯ ನಿರೂಪಣೆ,
ಕಾರ್ಯಕಾರಿ ಸಮಿತಿ ಸದಸ್ಯ
ಶ್ರೀ ಅನಂತ ಸೇತುರಾಂರವರಿಂದ



ಸರ್ವಸದಸ್ಯರ ಸಭೆಯಲ್ಲಿ
ಪ್ರಾರ್ಥನೆ ಸಲ್ಲಿಸಿದ
ಕುಮಾರಿ ಅಮೃತವರ್ಷಿಣಿ




ಸರ್ವಸದಸ್ಯರ ಸಭೆಯಲ್ಲಿ ಸಭಿಕರು



## ಸಂಘದ ಪ್ರಮಾಣ ಪತ್ರ 1938

ಚಿತ್ರ ಕೃಪೆ:
ಶ್ರೀ ಸಿ.ಎಸ್.ಎಸ್. ಮೂರ್ತಿ



Certificate of Registration.

I hereby certify that the ...

is this day registered under the Mysore Societies Regulation No. III of 1904.

Fee paid, Rupees ...

Given under my hand at Bangalore the ... day of ...

One Thousand Nine Hundred and ...

ದಿನಾಂಕ 2–11–1938ರಲ್ಲಿ ನಮ್ಮ ಸಂಘಕ್ಕೆ
ಮೈಸೂರು ಸರ್ಕಾರದ *Registrar of Joint Stock Companies in Mysore*
ಪ್ರಮಾಣ ಪತ್ರ ಸಂದಿದೆ

## ಅಭಿನಂದನೆಗಳು




ಸಂಘದ ಮಹಾಪೋಷಕರಾದ
ಆರ್.ಎಸ್. ವೆಂಕಟಗಿರಿಯಪ್ಪನವರು
ಬೃಹಚ್ಚರಣ ಸಂಘದ ವಿದ್ಯಾನಿಧಿಗಾಗಿ
ರೂ.10,000/–ಗಳನ್ನು
ದೇಣಿಗೆ ನೀಡಿರುವುದಕ್ಕೆ ಸಂಘವು
ಅಭಿನಂದಿಸುತ್ತದೆ



ಸಂಘದ ಪೋಷಕ ದಂಪತಿಗಳಾದ ಶ್ರೀಮತಿ ಗಾಯಿತ್ರಿ
ಶೇಷಾಚಲಾ ಹಾಗೂ ಶ್ರೀ ಶೇಷಾಚಲಾರವರು
ಬೃಹಚ್ಚರಣ ಸಂಘದ ಅನ್ನ ಸಂತರ್ಪಣ ನಿಧಿಗಾಗಿ
ರೂ.10,000/–ಗಳನ್ನು ದೇಣಿಗೆ ನೀಡಿರುವುದಕ್ಕೆ
ಸಂಘವು ಅಭಿನಂದಿಸುತ್ತದೆ

# ಮಂಕುತಿಮ್ಮನ ಕಗ್ಗ ಲಕ್ಷ್ಮೀ ತಾತ್ಪರ್ಯ



**ಹುಲ್ಲಾಗು ಬೆಟ್ಟದಲಿ ಮನೆಗೆ ಮಲ್ಲಿಗೆಯಾಗು**
**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ**
**ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ**
**ಎಲ್ಲರೊಳಗೊಂದಾಗು – ಮಂಕುತಿಮ್ಮ!**

ಜಗತ್ತು ಒಂದು ದೇವಾಲಯವಿದ್ದಂತೆ. ವಿಶ್ವದ ಜನರೆಲ್ಲರೂ ಆ ಗುಡಿಯನ್ನು ಕಟ್ಟುವ ಕೆಲಸದಾಳುಗಳು. ಇದರಲ್ಲಿ ಯಾವ ಹಿರಿಮೆಯೂ ಕೀಳರಿಮೆಯೂ ಇಲ್ಲ. ಎಲ್ಲರೂ ಒಂದೇ ಭಗವಂತನ ಅಂಶವೇ ಪ್ರಕೃತಿ. ಆ ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುವಿಗೂ ಒಂದೊಂದು ಸ್ಥಾನವನ್ನು ಕೊಟ್ಟಿರುತ್ತಾನೆ. ನಮ್ಮ ಕೈಗೆ ಬಂದಿರುವ ಯಾವ ಕೆಲಸವಾದರೂ ಆಗಲಿ, ಆ ಕೆಲಸವನ್ನು ಕಿರಿಕಿರಿ ಎನ್ನದೇ – ಪ್ರಾಮಾಣಿಕತೆಯಿಂದ ಮಾಡಿದರೆ ಅದೇ ಭಗವಂತನಿಗೆ ಅರ್ಪಿತ. ಕಾಯಕವೇ ಕೈಲಾಸ ಎಂದಿದ್ದಾರೆ ಬಸವಣ್ಣನವರು.

ಹುಲ್ಲಾಗು ಬೆಟ್ಟದಡಿ ಎಂದಿದ್ದಾರೆ. ಅಗಾಧವಾದ ಪರ್ವತದ ಮುಂದೆ ನಾನು ಬಹಳ ಸಣ್ಣವ ಎಂದೆನಬೇಡ. ಪರೋಪಕಾರಾರ್ಥಂ ಇದಂ ಶರೀರಂ ಎನ್ನುವಂತೆ, ನಾಲ್ಕು ಜನರ ಉಪಕಾರಕ್ಕಾಗಿಯೇ ಈ ಜೀವವಿದೆ. ಬೆಟ್ಟದ ತಪ್ಪಲಿನಲ್ಲೇ ಅನೇಕ ದನಕರುಗಳು ಬೆಳಿಗ್ಗೆಯಿಂದ ಸಾಯಂಕಾಲದ ವರೆಗೂ ಓಡಾಡಿ ಅಲ್ಲಿರತಕ್ಕಂಥ ಹುಲ್ಲನ್ನು ತಿಂದು ತನ್ನ ಹಸಿವನ್ನು ನೀಗಿಸಿಕೊಳ್ಳುತ್ತದೆ. ತಿಂದ ಆಹಾರವನ್ನು ಮೆಲುಕು ಹಾಕುತ್ತದೆ.

ಹುಲ್ಲಿಗೆ ಅನೇಕ ಅರ್ಥಗಳಿವೆ. ಮೇವು–ಶಾಂತಿ–ತಂಪು–ಸಹನೆ–ಸಂಯಮಗಳ ಸಂಕೇತ ಎಂದು ಹೇಳಬಹುದು. ಹುಲ್ಲಿಗೆ ಸಾಹಿತ್ಯದಲ್ಲಿ ಬಹಳ ಪ್ರಾಮುಖ್ಯತೆ ಇದೆ. ದಾಸರು ಹೂವ ತರುವರ ಮನೆಗೆ ಹುಲ್ಲು ತರುವ ಎಂದು ಹಾಡಿದ್ದಾರೆ. ಮಹಾದೇವಿಯಕ್ಕ ಹೂವ ತರುವರ ಮನೆಗೆ ಹುಲ್ಲುತಾರನೆಂದು ಕ್ರಾಂತಿ ಮನೋಭಾವದಿಂದ ವಚನವನ್ನು ಬರೆದಿದ್ದಾರೆ. 'ಈಗಿನ ಕವಿಯತ್ರಿ ಒಬ್ಬರು ಅಕ್ಕನ ಹೇಳಿಕೆಯನ್ನು ವಿಭಿನ್ನ ದೃಷ್ಟಿಕೋನ ದಿಂದ ಹೀಗೆ ಹೇಳಿದ್ದಾರೆ. **'ಜಗದಗಲ ಮುಗಿಲಗಲ ನಾನು ಹುಲ್ಲಾಗಬೇಕು'** ಎಂದಿದ್ದಾರೆ.

"ಹೂವಿಗಿಂತಾ ಹುಲ್ಲೇ ಹೆಚ್ಚು ಸಾರ್ಥಕತೆಯನ್ನು ಕೊಡುತ್ತದೆ. ಏಕೆಂದರೆ ಪುಟನೆಗೆದು ಓಡಾಡುವ ಮೊಲ ಜಿಂಕೆಗಳಿಗೆ ಆಧಾರವಾಗುತ್ತದೆ. ಹಾಲು ನೀಡುವ ಹಸು ಕರು, ಎಮ್ಮೆ, ಕುರಿ ರೈತರ ತೋಳಿಗೆ ಸಹಾಯವಾಗುತ್ತಾ ಎತ್ತು, ಕುದುರೆ ಎಲ್ಲಕ್ಕೂ ಮೇವಾಗುವುದರಿಂದ ಜನ್ಮ ಸಾರ್ಥಕತೆಯನ್ನು ಪಡೆಯುತ್ತದೆ" ಎಂದಿದ್ದಾರೆ. ಆದ್ದರಿಂದ ಹುಲ್ಲಾಗುವುದರಿಂದ ಯಾವ ಹೀನಾಯವೂ ಇಲ್ಲ. ನಾನೇನು ಹುಲುಕಡ್ಡಿ ಎಂಬ ಕೀಳರಿಮೆ ಬೇಡ ಎಂದಿದ್ದಾರೆ. ಈ ನಾಡು ಕಂಡ ಪ್ರಖ್ಯಾತ ದಾರ್ಶನಿಕ ಡಿ.ವಿ.ಜಿ. ಬಡವರ ಗುಡಿಸಿಲೆಂಬ ಗೂಡಿಗೆ ಸೂರಾಗುವ ಹಕ್ಕಿಪಕ್ಷಿಗಳು ಕಟ್ಟುವ ಗೂಡಿಗೆ ಮೆತ್ತನೆಯ ಆಸರೆಯಾಗಿ ಮತ್ತು ತಟ್ಟಿ ತಡಿಕೆಯ ಗೋಡೆಗೆ ಆಸರೆಯಾಗುವ ಸಾರ್ಥಕತೆ ಹುಲ್ಲಿನದು. ಇದರಿಂದ ಹುಲ್ಲಿನ ಮಹತ್ವವನ್ನು ನಾವು ತಿಳಿಯಬಹುದು.

ಮನೆಗೆ ಮಲ್ಲಿಗೆಯಾಗು ಸುಗಂಧವಾದ ಸುಂದರ ಶ್ವೇತ ಪುಷ್ಪ. ಶ್ವೇತವರ್ಣ ಪರಿಶುದ್ಧತೆಯ ಸಂಕೇತ. ಮೃದುತ್ವ ಹಾಗೂ ಸುವಾಸನೆ ಬೀರುವ ಸಂತಸದ ಸಂಕೇತವೂ ಆಗಿದೆ. ಮಲ್ಲಿಗೆಯ ಹೂವಿನಂತೆ ಪರಿಮಳವನ್ನು ಬೀರಿ... ಅಂದರೆ ಮೃದುವಾದ ಮಾತು ತ್ಯಾಗ ಸೇವೆಗಳಿಂದ ಮನೆಯವರೆಲ್ಲರ ಮನಸೆಳೆದು ಅವರ ಪ್ರೀತಿಗೆ ಪಾತ್ರನಾಗು ಎಂಬ ಆಶಯವನ್ನು ಕವಿ ಈ ಮೂಲಕ ತಿಳಿಸಿದ್ದಾರೆ.

ನಮ್ಮ ಜೀವನವೇ ನೋವು ನಲಿವುಗಳ ಮಿಶ್ರಣ. ಬೇವು, ಬೆಲ್ಲದಂತೆ. ದುರಾದೃಷ್ಟದಿಂದ ನಮ್ಮ ಬಾಳಲ್ಲಿ ಕಷ್ಟಗಳ ಮಳೆ ಸುರಿದರೂ ಅಚಲವಾಗಿ ದೃಢವಾಗಿ ನಿಂತು ಕೆಚ್ಚೆದೆಯಿಂದ ಕಷ್ಟಗಳನ್ನು ಎದುರಿಸುವ ಸ್ಥೈರ್ಯವನ್ನು ರೂಢಿಸಿಕೊಳ್ಳಬೇಕು. ಸಾಗರದ ದಂಡೆಯಲ್ಲಿ ಕಲ್ಲು ಎಷ್ಟೇ ತರಂಗಗಳು ಹೊಯ್ದಾಡಿ ಬಂದು ಅಪ್ಪಳಿಸಿದಾಗಲೂ, ನಿಶ್ಚಲವಾಗಿ ನಿಂತಂತೆ ನಾವೂ ಧೈರ್ಯಗೆಡದೆ ಸ್ಥಿರವಾಗಿ ನಿಲ್ಲುವಂತಾಗಬೇಕು ಏಕೆಂದರೆ ಜೀವನಚಕ್ರದಲ್ಲಿ ಕಷ್ಟದ ನಂತರ ಸುಖ... ಕತ್ತಲೆಯ ನಂತರ ಬೆಳಕು ಬಂದೇ ಬರುತ್ತದೆ. ಸುಖದ ಅನುಭವವಾಗುತ್ತದೆ. ಏನೇ ಆಗಲಿ ಮನೋಧಾರ್ಢ್ಯವನ್ನು ಬೆಳೆಸಿಕೊಳ್ಳಬೇಕು.

ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ಪ್ರಪಂಚದಲ್ಲಿ ನೋವು ತಿನ್ನುವವರೇ ಬಹಳ. ಅವರು ಜೀವನದ ಕಷ್ಟದಲ್ಲಿ ಬೆಂದು ಬಳಲಿ ಬೆಂಡಾಗಿ ಕಹಿ ಉಂಡವರಿಗೆ ಬೆಲ್ಲದಂತಿರು. ನೊಂದ ಮನಸ್ಸಿಗೆ ಒಂದು ಸಾಂತ್ವನದ ಮಾತು... ಹಸಿದವರಿಗೆ ಊಟ... ರೋಗಿಗಳಿಗೆ ಮರುಕ ತೋರಿದರೆ ಸಾಕು.. ಸಹಾಯ ಹಸ್ತನಾಗಿ ನಿಂತು ಸಹಾನುಭೂತಿ ತೋರುವವನಾಗಿ ಬಡಬಗ್ಗರಿಗೆ ಅನುಕೂಲ ಮಾಡುವಂಥ ಧೈರ್ಯ, ಸಹನೆ ಇರಲಿ. ಪರರ ಹಿತಕ್ಕಾಗಿ ಸೆಣಸಾಡು ಎಂದು ಹಿತವಚನ ಹೇಳಿದ್ದಾರೆ.

**ಎಲ್ಲರೊಳಗೊಂದಾಗು** : ಜಗತ್ತಿನಲ್ಲಿ ಮೇಲು ಕೀಳು ಎನ್ನದೆ ಬಡವ ಬಲ್ಲಿದ ಎಂಬ ತಾರತಮ್ಯವಿಲ್ಲದೆ ನಾನೇ ಬೇರೆ ಜಗತ್ತೇ ಬೇರೆ ಎಂಬ ಭೇದಭಾವ ಇಲ್ಲದೆ... ಎಲ್ಲರೊಳ ಗೊಂದಾಗಿ ಸಮರಸದಿಂದ ಇರುವುದೇ ಜೀವನದ ಗುರಿ ಯಾಗಬೇಕು. ಜಗತ್ತೇ ಒಂದು ನಾಟಕ ಶಾಲೆ. ಇದರಲ್ಲಿ ನಮಗೆ ಕೊಟ್ಟಿರುವ ಪಾತ್ರವನ್ನು ನಾವು ಸರಿಯಾಗಿ ನಿರ್ವಹಿಸಬೇಕು. ನಾನು ನೀನು ಅಳಿದರೆ ಸರ್ವೈಕ್ಯವಾದ ಒಂದು ಶಕ್ತಿ ಇದೆ. ಅದನ್ನು ಧ್ಯಾನಿಸುತ್ತಾ ಸಮಾಜದಲ್ಲಿ ಜೀವನವನ್ನು ಸಾಗಿಸಬೇಕು. ಇದು ಒಂದು ಜಾಡಿನ/ಜಾಣಿನ ನಾಟಕವೇ ಎಂದು ಬಹು ಮಾರ್ಮಿಕವಾಗಿ ಜನಗಳಿಗೆ ಉಪದೇಶಿಸಿದ್ದಾರೆ ಡಾ. ಡಿ.ವಿ.ಜಿ.

◆ **ಜಿ.ಪಿ. ಲಕ್ಷ್ಮೀದೇವಿ**
**23444798**

# ವೃತ್ತವೂ ವಿತ್ತವೂ

**ವೃತ್ತಂ ಯತ್ನೇನ ಸಂರಕ್ಷೇತ್ ವಿತ್ತಮ ಯಾತಿ ಯಾತಿ ಚ।**
**ಅಕ್ಷೀಣೋ ವಿತ್ತತಃ ಕ್ಷೀಣಃ ವೃತ್ತತಸ್ತು ಹತೋಹತಃ ॥**

ಮಾನವನು ತನ್ನ ಶೀಲವನ್ನು ಅಂದರೆ ಚಾರಿತ್ರ್ಯವನ್ನು ಎಚ್ಚರಿಕೆಯಿಂದ ಚೆನ್ನಾಗಿ ಕಾಪಾಡಿಕೊಳ್ಳಬೇಕು. ವಿತ್ತವಾದರೋ ಅಂದರೆ ಹಣವಾದರೋ ಬರುತ್ತದೆ ಹೋಗುತ್ತದೆ. ಹಣವಿಲ್ಲದ ಮಾತ್ರಕ್ಕೆ ಅವನೇನು ಹಾಳಾಗಿ ಹೋಗುವುದಿಲ್ಲ. ಆದರೆ ಶುದ್ಧಚಾರಿತ್ರ್ಯದಿಂದ ಒಮ್ಮೆ ಜಾರಿಬಿದ್ದನೆಂದರೆ ಅಂಥವನು ಸತ್ತಂತೆಯೇ ಸರಿ.

ವಿತ್ತ, ವೃತ್ತ ಎಂದು ಎರಡು ಶಬ್ದಗಳಿವೆ. ವಿತ್ತನೆಂದರೆ ಹಣ, ವೃತ್ತ ಎಂದರೆ ನಡತೆ. ಆದರೆ ಎರಡು ಶಬ್ದಗಳ ಅರ್ಥದಲ್ಲಿ ಹಾಗೂ ಕಾರ್ಯದಲ್ಲಿ ತುಂಬಾ ವ್ಯತ್ಯಾಸ ವಿರುತ್ತದೆ. ವಿತ್ತವು ಇಂದು ಬರುತ್ತದೆ, ನಾಳೆ ಹೋಗುತ್ತದೆ. ಇಂದು ದರಿದ್ರನಾಗಿರುವವನು ನಾಳೆ ವಿತ್ತವಂತನಾಗ ಬಹುದು. ಬಡತನದಿಂದ ಮನುಷ್ಯನ ಗೌರವಕ್ಕೇನು ಕುಂದು ಬಂದೊದಗಲಾರದಷ್ಟೇ ಶ್ರೀಮಂತನಾದ ಮಾತ್ರಕ್ಕೆ ಅಷ್ಟರಿಂದ ಅವನೇನು ಜಗತ್ತಿನಲ್ಲಿ ಸರ್ವರಿಗೂ ವಂದ್ಯನಾಗುವುದಿಲ್ಲ.

ಆದರೆ ವೃತ್ತವು ಹಾಗಲ್ಲ ಮನುಷ್ಯನ ಯೋಗ್ಯತೆಯು ಅವನ ಸತ್ ಚಾರಿತ್ರ್ಯದ ಮೇಲೆ ನಿಂತಿರುತ್ತದೆ. ಸದಾಚಾರ ನಿಷ್ಠೆ, ಸತ್ ಸಂಪ್ರದಾಯ, ಸತ್ ಚಾರಿತ್ರ್ಯ, ಶೀಲ ಇವುಗಳೇ ಮನುಷ್ಯನ ಶಾಶ್ವತ ಸಂಪತ್ತು ಒಮ್ಮೆ ಮನುಷ್ಯನು ಸತ್ ಚಾರಿತ್ರ್ಯದಿಂದ ಜಾರಿಬಿದ್ದನೆಂದರೆ ಅವನ ಕತೆ ಮುಗಿದಂತೆಯೇ ಇವನಿಗೆ ಅಧೋಗತಿ. ಒಮ್ಮೆ ಹೋದ ಶೀಲವು ಏನು ಮಾಡಿದರೂ ಬರುವುದಿಲ್ಲ. ಹಣವು ಹೋದರೆ ಪುನಃ ಬರುತ್ತದೆ. ಬಂದ ಹಣವು ಪುನಃ ಹೋಗಿಬಿಡುತ್ತದೆ. ಹಣವು ಶಾಶ್ವತವಲ್ಲ. ಅನಿತ್ಯವು ಆದರೆ ಶೀಲವು ಹೋಯಿತೆಂದರೆ ಅವನು ಮೃತನಾದಂತೆಯೇ ಸರಿ. ಶೀಲದಿಂದ ಜಾರಿಬಿದ್ದನೆಂದರೆ ಅವನಿಗೆ ಸೀದಾ ಅಧೋಗತಿ!

If wealth is lost, nothing is lost; If health is lost, some thing is lost; but if character is lost every thing is lost, ಚಾರಿತ್ರ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು.



◆ **ಶ್ರೀನಿವಾಸಯ್ಯ**

# ಸಹನೆ

ಬದುಕಿನಲ್ಲಿ ಎಲ್ಲವೂ ನಾವು ಎಣಿಸಿದಂತೆಯೇ ನಡೆಯುವುದಿಲ್ಲ. ನಮ್ಮ ನಿರೀಕ್ಷೆಗೂ ಮೀರಿ ನಡೆಯು ವಂತಹ ಘಟನೆಗಳೇ ಹೆಚ್ಚಾಗಿರುತ್ತದೆ. ಯಾರೇ ಆಗಲಿ, ನಮ್ಮ ಅಪೇಕ್ಷೆಗೆ ತಕ್ಕ ಹಾಗೆ ವರ್ತಿಸುವುದು ಅಪರೂಪ. ಯಾವುದೇ ಕೆಲಸವಾಗಲಿ, ನಾವಂದು ಕೊಂಡಂತೆ ಆಗದಿದ್ದರೆ ಸಹನೆಯನ್ನು ಕಳೆದುಕೊಳ್ಳುತ್ತೇವೆ. ಸಹನೆ ನಮ್ಮ ಜೀವನದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಅದನ್ನು ನಮ್ಮ ಬದುಕಿನಲ್ಲಿ ಸಾಮರಸ್ಯವಾಗಿ ಅಳವಡಿಸಿಕೊಂಡಾಗ ಮಾತ್ರ ಬದುಕು ನಿರಾತಂಕವಾಗಿ ಸಾಗಲು ಸಾಧ್ಯ. ನಾವು ಇತರರೊಡನೆ ಮಾತನಾಡುವಾಗ, ವ್ಯವಹರಿಸುವಾಗ ತಾಳಿದವನು ಬಾಳಿಯಾನು ಎಂಬಂತೆ ಸಹನೆ, ಸಂಯಮದಿಂದ ವರ್ತಿಸಿದರೆ ವ್ಯವಹಾರ ಸುಸೂತ್ರವಾಗಿ ಸಾಗಬಹುದು.

ಈ ಜಗತ್ತಿನಲ್ಲಿ ಹಲವಾರು ರೀತಿಯ ಮನಸತ್ತ್ವ ಗಳಿರುತ್ತದೆ ಎಂಬುದನ್ನು ನಾವು ಮೊದಲು ಅರಿಯ ಬೇಕು. ಅಸಹನೆಯಿಂದ ನಮ್ಮ ಲೆಕ್ಕಾಚಾರಗಳೆಲ್ಲಾ ತಲೆಕೆಳಗಾಗಬಹುದು. ದುಡುಕು ಸ್ವಭಾವ, ಬದುಕನ್ನು ಅಸಹನೀಯವಾಗಿಸುತ್ತದೆ. ನಾವು ಎಷ್ಟೇ ಅಸಂತುಷ್ಟಿ ಗಳಾದರೂ ಅದನ್ನು ಇತರರ ಮುಂದೆ ಬಹಿರಂಗ ಗೊಳಿಸಬಾರದು. ಮನುಷ್ಯನಿಗೆ ಎರಡು ದುರ್ಗುಣಗಳು ಇರುತ್ತದೆ. ಒಂದು ಅಸಹನೆ, ಇನ್ನೊಂದು ದುರಾಸೆ. ಈ ಎರಡು ದುರ್ಗುಣಗಳಿಂದಾಗಿಯೇ ಮನುಷ್ಯ ನೆಮ್ಮದಿ ಯನ್ನು ಕಳೆದುಕೊಳ್ಳುತ್ತಾನೆ. ಬದುಕಿನಲ್ಲಿ ಏನಾದರೂ ಸಾಧಿಸಬೇಕಾದರೆ ಅದಕ್ಕೆ ಸಹನೆ ಬಹಳ ಮುಖ್ಯ ವೆನಿಸುತ್ತದೆ. ಸಹನೆಯೆಂಬ ಸದ್ಗುಣವನ್ನು ಮೈಗೂಡಿಸಿ ಕೊಂಡವನು ನಿಸ್ಸಂಶಯವಾಗಿ ಪ್ರಜ್ಞಾವಂತನಾಗಿರುತ್ತಾನೆ. ಎಂತಹ ಅಡ್ಡಿ, ಆತಂಕಗಳು ಎದುರಾಗಲಿ, ಅವುಗಳನ್ನೆಲ್ಲಾ ನಿರಾತಂಕವಾಗಿ ನಿವಾರಿಸಿಕೊಂಡು ಮುನ್ನಡೆಯಬಲ್ಲ, ಪಾಲಿಗೆ ಬಂದದ್ದು ಪಂಚಾಮೃತವೆಂದು ಬಂದದ್ದನ್ನೆಲ್ಲಾ ಒಂದೇ ಮನಸ್ಸಿನಿಂದ ಸ್ವೀಕರಿಸಿ ಒಪ್ಪಿಕೊಂಡರೆ ಬದುಕು ಹಗುರವೆನಿಸುತ್ತದೆ. ಸಹನೆ ಕಳೆದುಕೊಂಡು, ಉದ್ವೇಗ ದಿಂದ ವರ್ತಿಸಿ ಇತರರ ಬೇಸರಕ್ಕೆ ಕಾರಣವಾಗುವುದು ಸಜ್ಜನಿಕೆಯ ಲಕ್ಷಣವಲ್ಲ. ಸಹನೆ ಪರಿಪಕ್ವ ಮನಸ್ಸಿಗೆ ಒಂದು ನಿಗ್ರಹ ಶಕ್ತಿ. ವಿಜಯ ಸಾಧನೆಗೆ ಸಹನೆಯೇ ಪ್ರೇರಕ ಹುಮ್ಮಸ್ಸು.

◆ **ಟಿ.ಎಸ್. ರಾಮಸ್ವರೂಪ್**



ಮಕ್ಕಳ ಕಥೆ

# ಸೋಲಿಗಿಂತ ಮಾನವೀಯತೆ ಮುಖ್ಯ

ಒಂದು ಊರಿನಲ್ಲಿ ಒಬ್ಬ ಸನ್ಯಾಸಿ ವಾಸ ಮಾಡುತ್ತಿದ್ದ. ಯಾರೊಡನೆಯೂ ಹೆಚ್ಚು ಮಾತನಾಡದೆ ಸರಳವಾಗಿ ಜೀವಿಸುತ್ತಿದ್ದ. ಆತ ತನ್ನ ಬಳಿಗೆ ಬಂದವರ ಸಮಸ್ಯೆಗಳನ್ನು ಆಲಿಸಿ, ಪರಿಹಾರಗಳನ್ನು ಸೂಚಿಸುತ್ತಿದ್ದ ಹಾಗಾಗಿ ಊರಿನ ಜನ ಬಹಳ ಗೌರವದಿಂದ ಕಾಣುತ್ತಿದ್ದರು.

ಆಗಾಗ ಭವಿಷ್ಯದ ವಿಚಾರಗಳನ್ನು ಹೇಳುವುದರಲ್ಲಿ ಆತ ಪ್ರಸಿದ್ಧಿ ಪಡೆದಿದ್ದ ಅವು ನಿಜವಾಗುತ್ತಿದ್ದವು. ಆದರಿಂದ ಜನರಿಗೆ ಆತನ ಭವಿಷ್ಯವಾಣಿಯ ಮೇಲೆ ಬಹಳ ವಿಶ್ವಾಸ ವಿದ್ದಿತ್ತು. ಆ ಊರಿನಲ್ಲಿದ್ದ ಒಬ್ಬ ಯುವಕ ಈ ಸನ್ಯಾಸಿ ಭವಿಷ್ಯ ನುಡಿಯುವುದೆಲ್ಲಾ ಬೂಟಾಟಿಕೆ. ಆತನಿಗೆ ವರ್ತಮಾನವನ್ನೇ ಗ್ರಹಿಸಲಾಗದು. ಭವಿಷ್ಯವೇನು ನುಡಿಯಬಲ್ಲ ಎಂದು ಅಪಹಾಸ್ಯ ಮಾಡಿ ತಿರುಗಾಡುತ್ತಿದ್ದ. ಆತನ ವಿಚಾರವನ್ನು ಸನ್ಯಾಸಿಗೆ ತಿಳಿಸಿದಾಗ ನಕ್ಕು ಸುಮ್ಮನಾದ.

ಆದರೆ ಯುವಕನಿಗೆ ದಿನದಿಂದ ದಿನಕ್ಕೆ ಸನ್ಯಾಸಿಯ ಜನಪ್ರಿಯತೆಯ ಮೇಲೆ ಮತ್ಸರ ಹೆಚ್ಚಾಯಿತು. ಸನ್ಯಾಸಿ ಹೇಳುವುದನ್ನು ಹೇಗಾದರೂ ಮಾಡಿ ಒಮ್ಮೆಯಾದರೂ ಸುಳ್ಳೆಂದು ಸಾಧಿಸಿ ತೋರಿಸಿದರೆ, ಆಗ ಆತನ ಜನಪ್ರಿಯತೆಗೆ ಧಕ್ಕೆ ಬರುತ್ತದೆ ಎಂದು ಮಾರ್ಗೋಪಾಯ ಹುಡುಕತೊಡಗಿದ.

ಅದೊಂದು ದಿನ ಯುವಕ ತನ್ನ ಎರಡು ಕೈಗಳ ನಡುವೆ ಜೀವಂತ 'ಹಕ್ಕಿ' ಮರಿಯೊಂದನ್ನು ಅಡಗಿಸಿಟ್ಟು, ಬೆನ್ನ ಹಿಂದೆ ಕೈಗಳನ್ನು ಇಟ್ಟುಕೊಂಡು ಸನ್ಯಾಸಿ ಬಳಿ ಬಂದು, "ನೀವು ಭವಿಷ್ಯ ನುಡಿಯುತ್ತೀರಿ ಎನ್ನುತ್ತಾರಲ್ಲಾ? ನನ್ನ ಕೈ ಒಳಗೊಂದು ಹಕ್ಕಿಮರಿ ಇದೆ. ಅದು ಬದುಕಿದೆಯೇ, ಸತ್ತಿದೆಯೇ ಎಂಬುದನ್ನು ಸಾಧ್ಯವಿದ್ದರೆ ತಿಳಿಸಿ ಎಂದ. ಒಂದು ವೇಳೆ ಸನ್ಯಾಸಿ ಹಕ್ಕಿಮರಿ ಬದುಕಿದೆ ಎಂದರೆ ಹಕ್ಕಿಯನ್ನು ಮುಷ್ಟಿಯಲ್ಲೇ ಸಾಯಿಸಿ. ಅದು ಸತ್ತಿದೆ ಎನ್ನುವುದು, ಹಕ್ಕಿ ಸತ್ತಿದೆ ಎಂದು ಸನ್ಯಾಸಿ ಹೇಳಿದರೆ ಜೀವಂತ ಹಕ್ಕಿಯನ್ನು ತೋರಿಸುವುದು, ಆ ಮೂಲಕ ಸನ್ಯಾಸಿಯನ್ನು ಸೋಲಿಸುವುದು ಎಂದು ಆಲೋಚಿಸಿದ್ದ.

ಸನ್ಯಾಸಿ ಯುವಕ ಮಾತನ್ನು ಕೇಳಿ ತಡಮಾಡದೆ. "ನಿನ್ನ ಕೈಯೊಳಗಿನ ಹಕ್ಕಿ ಸತ್ತಿದೆ ಎಂದರು. ಯುವಕ ಅಟ್ಟಹಾಸದಿಂದ ನಗುತ್ತಾ "ಕಪಟಿ ಸನ್ಯಾಸಿ, ನೋಡಿ ಹಕ್ಕಿ ಬದುಕಿದೆ." ಎಂದು ಮುಷ್ಟಿ ತೆರೆದಿದ್ದೇ ತಡ ಪುರ್ರನೇ ಹಾರಿ ಹೋಯಿತು.

ಸನ್ಯಾಸಿ ನಕ್ಕು ಯುವಕನಿಗೆ ಹೇಳಿದರು. 'ಮಗು ಕಪಟಿ ನಾನಲ್ಲ. ಕಪಟತನ ನಿನ್ನಲ್ಲೇ ಇತ್ತು. ಆ ಹಕ್ಕಿ ಬದುಕು ಮತ್ತು ಸಾವು ಎರಡೂ ನಿನ್ನ ಕೈಯೊಳಗಿದೆ.' ಎನ್ನುವುದು ನನಗೆ ಗೊತ್ತಿತ್ತು. ಆದರೂ ನಾನೇಕೆ ಅದು ಸತ್ತಿದೆ ಎಂದೆ ಗೊತ್ತೇ?

ಹಾಗೆ ಹೇಳಿದರೆ ನೀನು ಹಕ್ಕಿಯನ್ನು ಜೀವಂತ ಉಳಿಸುತ್ತೀ ಎಂಬುದು ನನಗೆ ತಿಳಿದಿತ್ತು. ಹಕ್ಕಿ ಉಳಿಯುವುದು ನನಗೆ ಬೇಕಿತ್ತು. ನನ್ನ ಗೆಲುವು ಅಥವಾ ಸೋಲಿಗಾಗಿ ನಿಷ್ಪಾಪಿ ಹಕ್ಕಿ ಬಲಿಯಾಗುವುದು ನನಗೆ ಬೇಕಿಲ್ಲ.

ಮಾನವೀಯತೆಯ ಗೆಲುವಿಗೆ ಕಾರಣವಾಗುವ ಇಂತಹ ಸಾವಿರ ಸೋಲುಗಳನ್ನು ನಾನು ಹೆಮ್ಮೆಯಿಂದ ಸ್ವೀಕರಿಸುತ್ತೇನೆ ಎಂದರು ಸನ್ಯಾಸಿ. ಯುವಕ ಸನ್ಯಾಸಿಯ ಮಾತು ಕೇಳಿ ತಲೆ ಬಾಗಿ ವಂದಿಸಿ ತನ್ನ ತಪ್ಪನ್ನು ಒಪ್ಪಿ ಕ್ಷಮೆ ಕೇಳಿದ. ನಿಜ, ಬದುಕಿನಲ್ಲಿ ಮಾನವೀಯತೆಗಿಂತ ಮಿಗಿಲಾದದು, ಯಾವುದೂ ಇಲ್ಲ.

ಸೋಲು ಮಾನವೀಯತೆಗಿಂತ ದೊಡ್ಡದಲ್ಲ. ಬೇರೆಯವರ ಸೋಲಿನಲ್ಲಿ ನಮ್ಮ ಗೆಲುವನ್ನು ನಾವು ಯಾವತ್ತು ನೋಡಬಾರದು. ಬೇರೆಯವರನ್ನು ಸೋಲಿಸಲು ಕಪಟತನಕ್ಕೆ ಇಳಿಯಲೂಬಾರದು. ಆತ್ಮತೃಪ್ತಿಯ ಗೆಲುವು ಮಾತ್ರ ನಿಜವಾದದ್ದು.



◆ಛಾಯಾ ಭಗವಾನ್
9980162364

**ಆರತಿ ಹಾಡು (ನಾರಾಯಣನಿಗೆ)**

ಶುಭ ಗಾಯತ್ರಿ



ಆರತಿ ಶ್ರೀಪತಿ ಚರಣಾರವಿಂದಕೆ
ಆರತಿ ಸುರಪತಿ ಪಾದಾರವಿಂದಕೆ ॥ಪ॥

ಮಾನಿನಿ ಮಾನವ ಕಾಯ್ದ ಪುನೀತಗೆ
ದಾನವಮರ್ಧನ ಜ್ಞಾನಿ ಸಂಪನ್ನಗೆ
ನಾನಾ ರೂಪವ ತೋರಿದ ಸ್ವಾಮಿಗೆ
ಧ್ಯಾನಿಸಿ ನೆನೆವರ ಸತತ ಪೊರೆಯುವಗೆ ॥1॥

ದಶಶಿರ ಅಸುರನ ಅಸುವ ತೆಗೆದವಗೆ
ಶಿಶುಪಾಲನ ಶಿರ ಬೇಧಿಸಿದವನಿಗೆ
ವಿಷಕಂಠನ ಪರಮಾಪ್ತಗೆ ಶ್ರೀಶಗೆ
ಯಶೋದಾನಂದ ಶ್ರೀ ಹೃಷಿಕೇಶಗೆ ॥2॥




**ಸಚ್ಚಿದಾನಂದ ರೂಪಾಯ ವಿಶ್ವೋತ್ಪತ್ಯಾದಿ ಹೇತವೇ।**
**ತಾಪತ್ರಯ ವಿನಾಶಾಯ ಶ್ರೀ ಕೃಷ್ಣಾಯ ವಯಂ ನಮಃ॥**

ಕರ್ಷತಿ ಸರ್ವ ಆಕರ್ಷತಿ ಇತಿ ಕೃಷ್ಣ. ತನ್ನ ಭಕ್ತರನ್ನು ಆಕರ್ಷಿಸಿ ತನ್ನತ್ತ ಸೆಳೆಯುವವನು. ದಶಾವತಾರದಲ್ಲಿ ಶ್ರೀಕೃಷ್ಣನದು ಎಂಟನೆಯ ಅವತಾರ. ಇದು ಪೂರ್ಣಾವ ತಾರವೆಂದು ಗುರುಪರಂಪರೆಯಲ್ಲಿ ತಿಳಿಸಲಾಗಿದೆ. ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣವೇ ಅವತಾರಗಳ ಉದ್ದೇಶ. ದೇವಕಿ ಮತ್ತು ವಸುದೇವರ ಎಂಟನೆಯ ಮಗುವಾಗಿ ಕೃಷ್ಣನು ರೋಹಿಣಿ ನಕ್ಷತ್ರದಲ್ಲಿ ಅಷ್ಟಮಿ ತಿಥಿಯಂದು ಮಧ್ಯರಾತ್ರಿ ಅವತರಿಸಿದನೆಂದು ಭಗವಾನ್ ವೇದವ್ಯಾಸರು ಭಾಗವತ ಪುರಾಣದಲ್ಲಿ ಉಲ್ಲೇಖಿಸಿದ್ದಾರೆ. ಆ ಸಮಯದಲ್ಲಿ ದೇವಕಿ ವಸುದೇವರು ಬಂಧನದಲ್ಲಿದ್ದರು. ಮಧ್ಯರಾತ್ರಿ ಎಂದರೆ ಮನುಷ್ಯನು ತಾನು ಪೂರ್ಣತ್ವದ ಅಂಶ ಎಂಬ ಅರಿವಿಲ್ಲದೆ ಅಜ್ಞಾನವೆಂಬ ತಪ್ಪು ತಿಳಿವಳಿಕೆಯಿಂದ ಅಂಧಕಾರ ದಲ್ಲಿರುವಾಗ ಜ್ಞಾನವೆಂಬ ಬೆಳಕಿನ ಅವತಾರವಾಗಿ ತಾನೇ ಹಾಕಿಕೊಂಡಿರುವ ನಾನು, ನನ್ನದು ಎಂಬ ಸಂಕೋಲೆಗಳನ್ನು ಕಳಚಿ ತನ್ನ ಸ್ವಸ್ವರೂಪದ ಅರಿವನ್ನು ಪಡೆಯುವುದು ಎಂದರ್ಥ. (ಭಗವಂತನ ಅನುಗ್ರಹ, ದರ್ಶನ ಆದೊಡನೆ ಪ್ರಾಪಂಚಿಕ ವಿಷಯದತ್ತ ಗಮನವಿಲ್ಲದಂತಾಗಿ ನಾನು, ನನ್ನದು ಎಂಬ ಸಂಕೋಲೆ ತಾನಾಗೆ ಕಳಚಿಹೋಗುತ್ತದೆ). ವಸುದೇವನು ಕೃಷ್ಣನನ್ನೇ ತನ್ನ ಬುದ್ಧಿಯಲ್ಲಿ ತುಂಬಿಕೊಂಡಿದ್ದ ರಿಂದ ಅವನಿಗೆ ಯಾವ ತೊಡಕುಗಳೂ ಬಾಧಿಸಲಿಲ್ಲ. ಘೋರ ಮಳೆ ಮತ್ತು ತುಂಬಿದ ಯಮುನಾ ನದಿ ಇವುಗಳು ಜೀವನದಲ್ಲಿ ಎದುರಾಗುವ ಸಂಕಷ್ಟಗಳ ಸುರಿಮಳೆ, ಜೀವನ ಪ್ರವಾಹದಲ್ಲಿ ಮುಳುಗದೆ ಅಪವರ್ಗವಾದ ಮೋಕ್ಷವೆಂಬ ಗುರಿ ತಲುಪಲು ಯಾವುದೇ ತೊಂದರೆಗಳಾಗುವುದಿಲ್ಲ ಎಂದು ತಿಳಿಸುತ್ತದೆ.

ಕೃಷ್ಣನನ್ನು ನವನೀತಚೋರ ಎಂದು ದಾಸರೆಲ್ಲಾ ಕೊಂಡಾಡಿದ್ದಾರೆ. ನವನೀತವು ತನ್ನ ಮೃದುತ್ವಕ್ಕೆ ಹೆಸರು ಪಡೆದಿದೆ. ಗೋಪಿಯರು ಸದಾ ಕೃಷ್ಣ ಸ್ಮರಣೆ ಮಾಡುತ್ತಾ ತಮ್ಮ ಮನಸ್ಸನ್ನು ಅವನಲ್ಲೇ ಇರುವಂತೆ ಇಡುತ್ತಿದ್ದರು. ಬೆಣ್ಣೆಯು ಮನಸ್ಸಿನ ಸಂಕೇತ. ನಮ್ಮ ಮನಸ್ಸಿನ ಕಲ್ಮಶಗಳೆಲ್ಲಾ ತೊಳೆದಾಗ ನಿರ್ಮಲವಾದ ಮೃದು ಬೆಣ್ಣೆಯಂತಾಗುತ್ತದೆ. ಕೃಷ್ಣನಿರುವ ಜಾಗ ನಮ್ಮ ಮನಸ್ಸೆಂದಾಗ ಆ ಮನಸ್ಸೆಂಬ ಬೆಣ್ಣೆಯನ್ನು ಕದಿಯಲು ಶ್ರೀ ಕೃಷ್ಣ ಬರುತ್ತಾನೆ ಎಂದರೆ ಮನಸ್ಸು ನಿರ್ಮಲವಾದಾಗ ಚಿತ್ತ ಶುದ್ಧಿಯಾಗಿ, ನಿಶ್ಚಯಾತ್ಮಕ ಬುದ್ಧಿ ಹೊಂದಿ ಆತ್ಮಜ್ಞಾನ ಪ್ರಾಪ್ತಿಗೆ ಅರ್ಹವಾಗುತ್ತದೆ.

ದಾಮೋದರ ಪ್ರಸಂಗದಲ್ಲಿ ಶ್ರೀ ಕೃಷ್ಣನನ್ನು ತಾಯಿ ಯಶೋಧೆಯು ಹಗ್ಗದಿಂದ ಬಂಧಿಸಲು ಪ್ರಯತ್ನಿಸಿದಾಗ ಒಂದು ಮೊಳದಷ್ಟು ಹಗ್ಗ ಕಡಿಮೆ ಆಗುತ್ತಲೇ ಇತ್ತು. ಇದರ ಒಳಾರ್ಥವೇನೆಂದರೆ ನಾವು ಭಗವಂತನನ್ನು 'ಇದಮಿತ್ಥಂ' ಎಂದು ಎನ್ನಲಾಗುವುದಿಲ್ಲ, ಇಷ್ಟೇ, ಇದೇ ಎಂದು ಸೀಮಿತ ಮಾಡಲಾಗುವುದಿಲ್ಲ. ಅವನು ನಮ್ಮ ಆಲೋಚನೆಗೂ ಸಿಲುಕಿದವನು. ಅವನ ವ್ಯಾಪ್ತಿ ಅಗಾಧ. ಯಾವುದೇ ಪ್ರಾಪಂಚಿಕ ವಸ್ತುಗಳಿಗೂ ಮೀರಿದವನು.

ಇನ್ನು ಕೃಷ್ಣನ ಲೀಲೆಗಳನ್ನು ಪರಾಮರ್ಶಿಸುವುದಾದರೆ, ಶಿಶುವಾಗಿದ್ದಾಗಲೇ ಯಾವುದೇ ಆಯುಧಗಳ ಸಹಾಯ ವಿಲ್ಲದೆ ಸಹಜವಾಗಿ ತನ್ನ ಬಾಲಲೀಲೆಗಳ ಮೂಲಕವೇ ಹಲವಾರು ಮಹಾರಾಕ್ಷಸರನ್ನು ಸಂಹರಿಸಿ ನಮಗೆ ಅದರಿಂದ ಮಹತ್ ತತ್ತ್ವದ ಅರಿವಾಗುವಂತೆ ಮಾಡಿದ್ದಾನೆ.

ಪೂತನಾ ಎಂದರೆ ಪುಣ್ಯ ಇಲ್ಲದವಳು ಎಂದರ್ಥ. ಮೋಹಕ ರೂಪದಲ್ಲಿ ಬಂದು ಕೃಷ್ಣನಿಗೆ ವಿಷಸ್ತನ್ಯಪಾನ ಮಾಡಿಸಿದಳು. ಪ್ರಪಂಚದಲ್ಲಿ ಮೋಹಕವಾಗುವ ಪ್ರತಿಯೊಂದು ವಿಷಯದ ಹಿಂದೆಯೂ ನಮ್ಮ ಆತ್ಮೋದ್ಧಾರಕ್ಕೆ ಮಾರಕ ವಾಗುವ ವಿಷದ ಛಾಯೆ ಇದ್ದೇ ಇರುತ್ತದೆ. ನಾವು ಭಗವಂತನೆಡೆಗೆ ದೃಷ್ಟಿ ಹರಿಸಿದಾಗ ಎಲ್ಲಾ ವಿಷಯವೆಂಬ ವಿಷವನ್ನು ಹೀರಿ ಉದ್ಧಾರದತ್ತ ಕರೆದೊಯ್ಯುತ್ತಾನೆ.

ಶಕಟಾಸುರನು ಬಂಡಿ ರೂಪದಲ್ಲಿ ಬರುವ ರಾಕ್ಷಸ. ಕೃಷ್ಣನು ತನ್ನ ಪುಟ್ಟ ಕಾಲುಗಳಿಂದ ಒದ್ದು ಅವನನ್ನು ಸಂಹರಿಸಿದನು. ನಾವು ಹುಟ್ಟು ಸಾವೆಂಬ ಸಂಸಾರ ಚಕ್ರ ದಿಂದ ಬಂಧಿತವಾಗಿರುವ ಶರೀರವೆಂಬ ಬಂಡಿಯಲ್ಲಿ ರುವಾಗ ಕೃಷ್ಣನು ಅದನ್ನು ಜ್ಞಾನರೂಪದಲ್ಲಿ ಕೆಡವಿ ನೀನು ಯಾವುದೇ ಬಂಧನದಲ್ಲಿರುವವನಲ್ಲ ಎಂಬ ಅರಿವು ಮೂಡಿಸುತ್ತಾನೆ. ಕೃಷ್ಣನು ಬಂಡಿಯನ್ನು ಒದ್ದನು ಎಂದು ಹೇಳಿದರೆ, ನಾವು ಅಹಂಕಾರವೆಂಬ ಬಂಡಿಯಲ್ಲಿದ್ದಾಗ ಅವನ ಪಾದ ಸ್ಪರ್ಶವಾದ ಕೂಡಲೇ ಅಂದರೆ ಅವನು

ನಡೆದ ನಡೆಯನ್ನು ನಾವೂ ಅನುಸರಿಸಿದ್ದಾದರೆ ನಮ್ಮ ನಡವಳಿಕೆಯಲ್ಲಿ ಸುಧಾರಣೆಯಾಗಿ ಅಹಂಕಾರವು ಅಹಂಸ್ವರೂಪವಾಗುತ್ತದೆ.

ಎಂಟು ವರ್ಷದ ಬಾಲಕನು ಮಹಾರಾಜನಾದ ಬಲಶಾಲಿ ಕಂಸನೊಡನೆ ಸೆಣೆಸಿ ಅವನನ್ನು ಸಂಹರಿಸಿದನು. ಎಂಟು ಎಂದರೆ ಅಷ್ಟಾವಿಧ ಪ್ರಕೃತಿಯನ್ನು (ಪಂಚಭೂತ ಗಳಾದ ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ, ಅಂತಃಕರಣಗಳಾದ ಮನಸ್ಸು, ಬುದ್ಧಿ ಮತ್ತು ಅಹಂಕಾರ) ಮೀರಿರುವ ಭಗವಂತ ಎಂದು ಅರ್ಥೈಸಬೇಕು. ಕಂಸ ಎಂದರೆ ಗಣಿತದಲ್ಲಿ ಆವರಣ ಎಂದು ಅರ್ಥ. ಮೂರು ರೀತಿಯ ಆವರಣ ಚಿಹ್ನೆಗಳಿವೆ. [ ], { }, ( ) ಎಂಬುವು. [ ] ಎಂದರೆ ಅಹಂಕಾರ. { } ಎಂದರೆ ಮಮಕಾರ. ( ) ಎಂದರೆ ಸ್ವಭಾವ ದಾಟಿ ಗುಣಾತೀತ ಆಗುವುದು. ಮಾನವನು ಈ ಮೂರು ಆವರಣಗಳನ್ನು ಪ್ರಯತ್ನಪೂರ್ವಕವಾಗಿ ಭಗವಂತನ ಸ್ಮರಣೆಯಿಂದ ಬಿಡಿಸಿಕೊಂಡಾಗ ಮೋಕ್ಷದ ಅರಿವಾಗುತ್ತದೆ.

ಹೀಗೆ ಪ್ರತೀ ಅಸುರ ಸಂಹಾರದ ಹಿಂದೆಯೂ ತತ್ತ್ವ ಅಡಗಿದೆ. ಅಸುರ ಪ್ರವೃತ್ತಿಯು ಸಂಹಾರವಾಗಬೇಕಾದರೆ ಮಾಯಾಧೀಶನ ಕೃಪಾಕಟಾಕ್ಷದ ಅಗತ್ಯವಿದೆ. ಇದಕ್ಕೆ ನಾವು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳನ್ನು ಆಶಾಪರಿಮಿತಿಯಿಂದ ಸಾಧನಾ ಮಾರ್ಗವಾಗಿ ಅನುಸರಿಸಿ ಅವನ ಕೃಪೆಗೆ ಪಾತ್ರರಾಗಬೇಕು.

ಶ್ರೀ ಕೃಷ್ಣ ಪರಬ್ರಹ್ಮಣೇ ನಮಃ

◆ **ಆರ್.ರಮೇಶ್**
**9886034048**

## ವಿವಾಹದ ಶುಭಾಶಯಗಳು

* ಸಂಘದ ಸದಸ್ಯ ಶ್ರೀ ಅಶ್ವಥ್ ಮತ್ತು ಶ್ರೀಮತಿ ಮಂಜುಳಾರವರ ಪುತ್ರಿ **ಚಿ. ಪ್ರಿಯಾ**ರವರ ವಿವಾಹವು ಶ್ರೀ ಗೋಪಾಲರಾವ್ ಹಾಗೂ ಶ್ರೀಮತಿ ರಾಧಮ್ಮನವರ ಪುತ್ರ **ಚಿ. ರಾ. ಶ್ರೀನಿವಾಸಮೂರ್ತಿ**ರವರೊಂದಿಗೆ ದಿನಾಂಕ 13–08–18ರಂದು ಬೆಂಗಳೂರಿನಲ್ಲಿ ನೆರವೇರಿತು.
* ಸಂಘದ ಸದಸ್ಯರಾಗಿದ್ದ ದಿ॥ ಆರ್.ಜಿ. ವಿಜಯಸಾರಥಿ ಮತ್ತು ಶ್ರೀಮತಿ ಪಾರ್ವತಿಯವರ ಪುತ್ರಿ **ಚಿ. ಅರ್ಚನ**ರವರ ವಿವಾಹವು ಶ್ರೀಮತಿ ಗಾಯತ್ರಿದೇವಿ ಶ್ರೀ ಜನಾರ್ಧನ್‌ರವರ ಪುತ್ರ **ಚಿ. ನಾಗೇಂದ್ರ ಪ್ರಸಾದ್**ರವರೊಂದಿಗೆ ದಿನಾಂಕ 17.08.2018ರಂದು ಬೆಂಗಳೂರಿನಲ್ಲಿ ನೆರವೇರಿತು.
* ನಮ್ಮ ಸಮುದಾಯದವರೇ ಆದ ಶ್ರೀಯುತ ವೆಂಕಟೇಶ್ ಮತ್ತು ದಿ॥ ಡಾ. ಕೆ.ಆರ್. ಲಲಿತಾರವರ ಪುತ್ರಿ **ಡಾ॥ ಅಂಜನಾ ಕಶ್ಯಪ್** ಅವರ ವಿವಾಹವು ಶ್ರೀಮತಿ ವಿಜಯಾ ಪೈ ಮತ್ತು ಶ್ರೀ ಗಣೇಶ್ ಪೈ ರವರ ಪುತ್ರ **ಡಾ॥ ಮಾಧವ ಪೈ** ರವರೊಂದಿಗೆ 23–08–2018ರಂದು ಬೆಂಗಳೂರಿನಲ್ಲಿ ನೆರವೇರಿತು.

## ಮರೆಯಾದ ಮರೆಯಲಾಗದವರು

* ಸಂಘದ ಪೋಷಕ ಶ್ರೀ ಆರ್.ಎಸ್. ರಾಜಗೋಪಾಲ್ ರವರ ಸಹೋದರ **ಆರ್.ಎಸ್. ರಾಮಕೃಷ್ಣ** 19–07–18 ರಂದು ನಮ್ಮನ್ನಗಲಿದ್ದಾರೆ.
* ಸಂಘದ ಕಾರ್ಯಕಾರಿ ಸಮಿತಿ ಸದಸ್ಯ, ಖಜಾಂಚಿ ಎಸ್. ಸತ್ಯನಾರಾಯಣರವರ ಮಾವ ಸಂಘದ ಹಿರಿಯ ಸದಸ್ಯ **ಜಿ.ವಿ. ಸುಬ್ಬಣ್ಣ** 27–08–18ರಂದು ನಮ್ಮನ್ನಗಲಿದ್ದಾರೆ.
* ಸಂಘದ ಪೋಷಕ ಸದಸ್ಯ ಎಸ್. ಶಿವರಾಂರವರ ಅಳಿಯ **ಲಕ್ಷ್ಮೀನಾರಾಯಣರವರು (53)** ದಿನಾಂಕ 08–09–18ರಂದು ನಮ್ಮನ್ನಗಲಿದ್ದಾರೆ.

**ಸಂಘವು ನಮ್ಮನ್ನಗಲಿದವರಿಗೆ ಗೌರವ ಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ.**

## ಮಕ್ಕಳಿಗಾಗಿ ಲೆಕ್ಕಗಳು ಹಿಂದಿನ ಸಂಚಿಕೆಗೆ ಉತ್ತರಗಳು

**ಸರಿ ಉತ್ತರಗಳು**

(1) ಏಳೂವರೆ ಗಂಟೆಗಳು (2) 1200 ಡಬ್ಬಗಳು

(3) ದರ್ಜಿಯು ಹೊಲಿಯುವ ಅಂಗಿಗಳ ಸಂಖ್ಯೆ ಮಕ್ಕಳ ಅಂಗಿ 500, ಹುಡುಗರ ಅಂಗಿ 320 ಮತ್ತು ದೊಡ್ಡವರ ಅಂಗಿ 200. ದೊರೆಯುವ ಒಟ್ಟು ಲಾಭ 55,200 ರೂಪಾಯಿಗಳು

(4) 100 – (40% + 25% – 20%) = 55%

(5) 10 ರೂ ನಾಣ್ಯಗಳು 40, 5 ರೂ ನಾಣ್ಯಗಳು 60 ಮತ್ತು 1 ರೂ ನಾಣ್ಯಗಳು 100.

**ನಿಮ್ಮ ಉತ್ತರಗಳಲ್ಲಿ**

5 ಸರಿ ಇದ್ದರೆ ... ಅತ್ಯುತ್ತಮ
3–4 ಸರಿ ಇದ್ದರೆ ....... ಉತ್ತಮ
1–2 ಸರಿ ಇದ್ದರೆ ...... ಮಧ್ಯಮ
ಒಂದೂ ಸರಿ ಇಲ್ಲದಿದ್ದರೆ ... ಹೆಚ್ಚಿನ ಅಭ್ಯಾಸದ ಅಗತ್ಯವಿದೆ.

## ಹಿಂದಿನ ನೆನಪುಗಳು

* ಮರೆತಂತಿವೆ ಗತಿಸಿದ ಜೀವನ ದಿನಗಳು,
ಅಕ್ಕತಂಗಿಯರ ಪ್ರೀತಿ ಒಲವು ಇನ್ನು ಬರುವುದೇ ।
ಹುಡುಗಾಟದ ಅಣ್ಣತಮ್ಮಂದಿರ ಚಿಕ್ಕ ಪುಟ್ಟ ವ್ಯಾಜ್ಯಗಳು
ಎಲ್ಲವೂ ಬದುಕಿನ ಸ್ವಾರಸ್ಯ ನೆನಪುಗಳು ಮಾತ್ರ ॥

* ದೊಡ್ಡವರ ಆಶ್ರಯ, ಚಿಕ್ಕವರ ಆದರದ ಮಾತುಗಳು,
ಎಲ್ಲರೂ ಭಾಗಿಗಳು ವ್ಯವಸಾಯ ಉದ್ಯಮಗಳಲ್ಲಿ
ಸ್ಥಾನ, ಆದ್ಯತೆ ಸಂಸಾರ ಸಾಗರ ಪಥದಲ್ಲಿ,
ಎಲ್ಲದಕ್ಕೂ ಬೆಲೆ ಕಟ್ಟುವವರು ಇರಲಿಲ್ಲ ॥

* ಮತ ಬೇಧಗಳಿಲ್ಲ, ಎಲ್ಲರೂ ಸಮಾನರು,
ದುಡ್ಡು, ಕಾಸು ವ್ಯವಹಾರಗಳಲ್ಲಿ ನಿಷ್ಠೆ, ನಿಯಮ ।
ಅತಿ ಕಡಿಮೆ ಕೃತ್ರಿಮ, ದ್ರೋಹ ಸಂಚುಗಳು,
ಜನರ ನೆಮ್ಮದಿಯೇ ಅಂದಿನ ಅಧಿಪತಿಗಳ ಗುರಿ ॥

* ಸಕಾಲದಲ್ಲಿ ಮಳೆ, ಬೆಳೆ, ದೇವರು ಕೊಟ್ಟ ವರದಂತೆ,
ಬಡವ ಬಲ್ಲಿದರು ಎಲ್ಲರೂ ಸಮಾನರು ।
ನಾರಿಯರಿಗೆ ಮಾನ ಮರ್ಯಾದೆಗಳು,
ಕಾಲ ಕೆಟ್ಟದ್ದು ಎನ್ನುವವರು ಯಾರೂ ಇರಲಿಲ್ಲ ॥

* "ಬೇಕು, ಬೇಕು" ಎನ್ನುವ ಕಾಲ ಬಂತು,
ಪಾತಕಿಗಳು, ಕಳ್ಳರೂ ಹೆಚ್ಚಾಗಿ ಮೆರೆದರು ।
ದೇವರಿಗೂ ಹೆದರದ ಕಾಲ ಮಿಂಚುತಿದೆ,
ಮಳೆ, ಗಾಳಿ ಬಂದರೆ ಬಿಡದು ಇಂದು ॥

* ನಾಶವಾದರೂ, ಮಾನಹೋದರೂ, ಹೆದರದ ಜನ,
ಶ್ರೀಮಂತರದೇ ಆಳ್ವಿಕೆ, ಬಡವರ ಗೋಳು ।
ಈ ಭೂಮಿಗೆ ಬರಬೇಕು ರೂಪಾಂತರ ಕೊಡಲು,
ಎಲ್ಲಾ ಜನರ ಸುಖ ಶಾಂತಿಗೆ ಜಗದೋದ್ಧಾರಕನು ॥

◆ **ಎಂ.ಪಿ. ರಂಗನಾಥನ್**

# ಅನಂತ ಪದ್ಮನಾಭ ವ್ರತ – ಸಮನ್ವಯ ದೃಷ್ಟಿಕೋಣ

ಭಾರತೀಯ ಸಂಹಿತೆಯ ಉಪಾಸನಾ ಮಾರ್ಗದಲ್ಲಿ ಕೆಲವು ಆಚರಣೆಗಳಿವೆ. ಅವುಗಳಲ್ಲಿ ವ್ರತವೂ ಸೇರುತ್ತದೆ. ವ್ರತ ಎಂದರೆ ನಿಷ್ಠೆ ಪ್ರಪಂಚದಲ್ಲಿ ಸೃಷ್ಟಿ, ಸ್ಥಿತಿ, ಲಯವು ನಿತ್ಯ ನಿರಂತರವಾಗಿ ನಿಲ್ಲದೇ ನಡೆಯುತ್ತಿರುತ್ತದೆ ಮತ್ತು ಸದಾ ಬದಲಾವಣೆ ಆಗುತ್ತಿರುತ್ತದೆ. ಪದ್ಮನಾಭ ಎಂದರೆ ನಾಭಿಯಲ್ಲಿ ಪದ್ಮವನ್ನು ಹೊಂದಿರುವ ಮೂಲಕ ನಿರಂತರ ಸೃಷ್ಟಿಯನ್ನು ಮಾಡುತ್ತಲೇ ಇರುವವನು. ಕೇವಲ ಸದಾ ಒಂದೇ ಆಗಿರುವ ಪರಬ್ರಹ್ಮವು ಸೃಷ್ಟಿ ಕಾರ್ಯದಲ್ಲಿ ಚತುರ್ಮುಖ ಬ್ರಹ್ಮನಾಗಿ, ಸ್ಥಿತಿ ಕಾರ್ಯದಲ್ಲಿ ವಿಷ್ಣುವಾಗಿ ಮತ್ತು ಲಯಕಾರ್ಯದಲ್ಲಿ ಶಿವನಾಗಿ ತೋರಿಕೊಳ್ಳುವುದು.

ವ್ರತಗಳನ್ನು ಮಾನವನಿಗೆ ಮಾತ್ರ ಏಕೆ ಹೇಳಿರುವುದು? ಎಂದರೆ 84 ಲಕ್ಷ ಜೀವರಾಶಿಗಳಲ್ಲಿ ಮಾನವನು ಮಾತ್ರ ವಾಕ್ ಮತ್ತು ವಿವೇಕ ಉಳ್ಳವನು. "ಶರೀರಮಾದ್ಯಮ್ ಖಲು ಧರ್ಮ ಸಾಧನಮ್" ಎನ್ನುವಂತೆ ಇವುಗಳನ್ನು ಸಾಧನೆಗಾಗಿ ಬಳಸಿಕೊಳ್ಳಬೇಕು. ಜಗತ್ತಿನಲ್ಲಿ ಯಾವುದನ್ನೂ ನಿಕೃಷ್ಟವಾಗಿ ಕಾಣಬಾರದು ಏಕೆಂದರೆ ಎಲ್ಲವೂ ಅನಂತವಾಗಿದೆ ಮತ್ತು ವಿಶುದ್ಧ ಚೈತನ್ಯದಿಂದ ಕೂಡಿದೆ.

"ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್" ಎಂಬ ಭಗವದ್ಗೀತೆಯ ಶ್ಲೋಕದಂತೆ ಮಾಡುವ ಕರ್ಮವನ್ನು ಯಜ್ಞ (ಸಮರ್ಪಣಾ ಭಾವ), ದಾನ (ಎಲ್ಲವೂ ಭಗವಂತನಿಗೇ ಸೇರಿದ್ದು ಎಂಬ ಭಾವ) ಮತ್ತು ತಪಸ್ಸಿನಂತೆ (ಸತ್‌ಚಿಂತನೆಯ ಭಾವ) ಮಾಡಿದ್ದಾದರೆ ನಾನು ಮತ್ತು ಜಗತ್ತಿನ ಎಲ್ಲಾ ಚರಾಚರ ವಸ್ತುಗಳು ಆದಿ, ಅಂತ್ಯವಿಲ್ಲದ ಅನಂತವೇ ಎಂಬುದು ಖಾತ್ರಿಯಾಗುತ್ತದೆ.

ಈ ಅನಂತ ಪದ್ಮನಾಭ ವ್ರತವು ಕಾಲ, ದೇಶಕ್ಕೆ ಸೀಮಿತವಾದದ್ದು. ಕೆಲವೇ ವರ್ಗಕ್ಕೆ ಈ ವ್ರತದ ಆಚರಣೆ ಇದ್ದು ವೇದಾಂತದ ಸಾರವನ್ನು ಅರಿಯುವ ಮುಮುಕ್ಷುಗಳಿಗೆ ಸಾಧನಾ ಮಾರ್ಗವಾಗಿದೆ. ಭಗವದ್ಗೀತೆಯಲ್ಲಿ "ಶ್ರದ್ಧಾವಾಂಲ್ಲಭತೇ ಜ್ಞಾನಂ" ಎಂಬುವಂತೆ ಯಾವುದೇ ಆಚರಣೆಯಲ್ಲಿ ಮುಖ್ಯವಾದದ್ದು ಶ್ರದ್ಧೆ. ಫಲಾಪೇಕ್ಷೆ ಇಲ್ಲದೆ ದೃಢ ಚಿತ್ತದಿಂದ ವ್ರತವನ್ನು ನಿಷ್ಠೆಯಿಂದ ಕೈಗೊಳ್ಳಬೇಕು. ನಿಷ್ಠೆಯಿಂದ ಏಕಾಗ್ರತೆ ಪ್ರಾಪ್ತಿಯಾಗುತ್ತದೆ.

ಸಮನ್ವಯ ದೃಷ್ಟಿಯಿಂದ ನೋಡಿದ್ದಾದರೆ ಭಗವಂತನ ಲಕ್ಷಣಗಳಾದ ಸತ್ಯ, ಜ್ಞಾನ, ಅನಂತ, ಅಖಂಡತ್ವದ ಸದಾ ಪ್ರಜ್ಞೆಗೆ ಈ ವ್ರತವು ಒಂದು ಸಾಧನಾ ಮಾರ್ಗ.

◆ **ಆರ್. ರಮೇಶ್**
9886034048

## ಸಂಘದ ವಾರ್ಷಿಕ ನಿರ್ವಹಣಾ ವೆಚ್ಚ ನೀಡಿರುವ ಸದಸ್ಯರು

ಶ್ರೀಯುತರು

1. ಎ.ಪಿ. ನಾಗಭೂಷಣ್
2. ಕೆ. ಗುಂಡಪ್ಪ
3. ಜಿ. ಲೀಲಾವತಿ
4. ಗುರುಪ್ರಸನ್ನ
5. ಪ್ರಸಾದ್ ಬಿ.ಎನ್.ಜಿ.
6. ಕುಮಾರ್ ಬಿ.ಎನ್.ಜಿ.
7. ಶ್ರೀರಾಮ ಬಿ.ಜಿ.
8. ಕೆ.ಎಸ್. ಮಣಿ
9. ಭರತ್ ಶರ್ಮ
10. ಹೆಚ್.ಪಿ. ಶ್ರೀನಿವಾಸ್
11. ಹೆಚ್.ಎಸ್. ಪರಮೇಶ್ವರ್
12. ಎಸ್. ಸತ್ಯನಾರಾಯಣ
13. ರವಿಕಿರಣ್ ಟಿ.ಎನ್.
14. ಟಿ.ಎಂ. ಉಮೇಶ್
15. ಆರ್. ಗಣೇಶ್ ಶ್ರೀಧರ್
16. ರೂಪ ಶ್ರೀಧರ್
17. ಅಭಯ್ ಗಣೇಶ್
18. ಸೂರ್ಯನಾರಾಯಣ ಟಿ.ಪಿ.
19. ನಾಗಪದ್ಮ ಸೂರ್ಯನಾರಾಯಣ
20. ಸುಬ್ರಹ್ಮಣ್ಯ
21. ಸೋಮಸುಂದರ ಎಸ್.
22. ರಘುನಂದನ್
23. ರಮಾದೇವಿ
24. ಚಂದ್ರಶೇಖರ್
25. ವೆಂಕಟೇಶ್. ಜಿ.ಎಸ್.
26. ಸಂಧ್ಯಾ ವಿ.
27. ಮಂಜುನಾರಾಯಣ್
28. ನಾಗೇಶ್ ಟಿ.
29. ರವಿಶಂಕರ್ ಆರ್.ಪಿ.
30. ವೆಂಕಟೇಶ್ ಮೂರ್ತಿ ಬಿ.ಕೆ.
31. ವಿ.ಎಸ್. ಮೂರ್ತಿ
32. ಶ್ರೀನಿವಾಸನ್ಎಸ್.
33. ಎಸ್.ಓ. ಕೃಷ್ಣಮೂರ್ತಿ
34. ಸೂರ್ಯನಾರಾಯಣ ಬಿ.ಎಸ್.
35. ಎ. ಈಶ್ವರನ್
36. ಶ್ರೀನಿವಾಸ್ ಅನೇಕಲ್
37. ಕೃಷ್ಣಶರ್ಮ
38. ವೆಂಕಟೇಶ್ವರ ಪ್ರಸಾದ್ ಬಿ.
39. ವಿಶ್ವನಾಥ ಶರ್ಮ
40. ಜಯರಾಮ ಬಿ.ವಿ.
41. ಬಿ.ವಿ. ಪದ್ಮ
42. ಬಿ. ಶೇಷಾದ್ರಿ
43. ಜಗನ್ನಾಥ್ ಟಿ.ಪಿ.
44. ಮಂಜುನಾಥ್ ಆರ್.ಎನ್.
45. ವೆಂಕಟಸುಬ್ಬರಾವ್ ಆರ್.ಎನ್.
46. ರಘು ಟಿ.ಎನ್.
47. ಚಂದ್ರಮೌಳಿ ಆರ್.
48. ಸುಬ್ಬರತ್ನಮ್ಮ
49. ಶಿವರಾಮ ಎ.ಎನ್.
50. ಶಂಕರ್ ಪ್ರಸಾದ್
51. ತ್ಯಾಗರಾಜನ್ ಎಸ್.
52. ಅನಿರುದ್ಧ ತ್ಯಾಗರಾಜ್
53. ಎಸ್. ರಾಮಚಂದ್ರ
54. ಸತ್ಯಪ್ರಸಾದ್ ಎಸ್.ಆರ್.
55. ಜಯರಾಮ್
56. ರವಿಕುಮಾರ್ ಎಸ್.
57. ರಾಮಚಂದ್ರ
58. ಹರ್ಷ ನಾಗರಾಜ್
59. ವಾಸು ಎಸ್.
60. ಸುಂದರಮ್ಮ
61. ಅರುಣ್ ಎಸ್.ವಿ.
62. ಅಶೋಕ್ ವಿ.
63. ಸೂರಜ್
64. ಅನ್ನಪೂರ್ಣಮ್ಮ
65. ಸುಮ ಅರುಣ್
66. ರಮೇಶ್ ಬಾಬು
67. ಶಾಮಸುಂದರ್ ಆರ್.ಎ.
68. ಶ್ರೀಕಾಂತ
69. ಬಾಲಸುಬ್ರಹ್ಮಣ್ಯಂ
70. ರಮಾದೇವಿ ಎ.
71. ರಾಜೇಶ್ವರಿ ಆರ್.
72. ಸಂಧ್ಯ ಬಿ.ಇ.
73. ರಂಗನಾಥಪ್ರಸಾದ್
74. ರಾಮೇಶ್ವರ್ ಪ್ರಸಾದ್
75. ಎಸ್.ಸಿ. ಶ್ರೀನಿವಾಸ್.

## ನೆನಪಿನಂಗಳದಲ್ಲಿ ಚಿತ್ರ – 31

**ಕೃಪೆ : ಹಿರಿಯ ಪೋಷಕ ಶ್ರೀ ಎಸ್. ಶಿವರಾಂ**



**ಡಿವಿಜಿ ಮದುವೆಯ ಸಂದರ್ಭದಲ್ಲಿ ತೆಗೆದ ಚಿತ್ರ (1904)**

## ಸಂಘದ ಸರ್ವ ಸದಸ್ಯರ ಸಭೆಯಲ್ಲಿ ದೇಣಿಗೆ ನೀಡಿದ ಸದಸ್ಯರು

ಶ್ರೀಯುತರು

| | | |
|---|---|---|
| 1. | ಬಿ.ಎಸ್. ಸೂರ್ಯನಾರಾಯಣ | 2,500.00 |
| 2. | ಡಿ.ಎಸ್. ಭಾಸ್ಕರ್ | 2,000.00 |
| 3. | ವೆಂಕಟೇಶ್ | 2,000.00 |
| 4. | ಕೆ. ರಾಜಣ್ಣ | 2,000.00 |
| 5. | ಜಿ.ಎಸ್. ವೇಣುಗೋಪಾಲ್ | 2,000.00 |
| 6. | ಎಸ್. ಸೋಮಸುಂದರ | 2,000.00 |
| 7. | ಆರ್. ವೆಂಕಟೇಶ್ ಪ್ರಸಾದ್ | 1,500.00 |
| 8. | ಸತ್ಯನಾರಾಯಣ ಎಸ್. | 1,500.00 |
| 9. | ಸ್ವಪ್ನ ಅಯ್ಯರ್ | 1,000.00 |
| 10. | ಕೆಪಿಎಸ್ ಮಣಿ | 1,000.00 |
| 11. | ಉಮೇಶ್ ಟಿ.ಎನ್. | 1,000.00 |
| 12. | ಗಣಪತಿ | 500.00 |
| 13. | ಸತ್ಯಪ್ರಸಾದ್ | 500.00 |
| 14. | ಈಶ್ವರನ್ | 500.00 |
| 15. | ಶಿವರಾಮ | 500.00 |
| 16. | ಟಿ.ಎಸ್. ಚಂಪಕ್ | 400.00 |
| 17. | ಗೌರಮ್ಮ | 200.00 |

## ಸಂಘದ ಅನ್ನಸಂತರ್ಪಣಾ ನಿಧಿಗೆ ದೇಣಿಗೆ ನೀಡಿದ ದಾನಿಗಳು

ಶ್ರೀಯುತರು

| | | |
|---|---|---|
| 1. | ಆರ್.ಜಿ. ಶೇಷಾಚಲಂ | 5,000.00 |
| 2. | ಎ.ಆರ್. ಕೃಷ್ಣಶರ್ಮ | 3,000.00 |
| 3. | ಕಸ್ತೂರಿ ನಿರಂಜನ್ | 1,001.00 |
| 4. | ಜಿ.ಎಸ್. ನಾಗರಾಜ | 1,000.00 |
| 5. | ಆರ್.ಎಸ್. ರವಿಕುಮಾರ್ | 1,000.00 |
| 6. | ಬಾಬು | 1,000.00 |

## ಸಂಘದ ವಿದ್ಯಾನಿಧಿಗೆ ದೇಣಿಗೆ ನೀಡಿದ ದಾನಿಗಳು

ಶ್ರೀಯುತರು

| | | |
|---|---|---|
| 1. | ಕೆ. ಗುಂಡಪ್ಪ | 5,000.00 |
| 2. | ಸುಬ್ರಹ್ಮಣ್ಯಂ ಬಿ. | 5,000.00 |
| 3. | ಚಂಪಕಧಾಮ ಟಿ.ಎಲ್. | 5,000.00 |
| 4. | ರಾಹುಲ್ ಶ್ರೀನಿವಾಸ | 2,000.00 |
| 5. | ಸುಂದರ ಮೂರ್ತಿ ಎ.ಎಲ್. | 2,000.00 |
| 6. | ಹರ್ಷ ನಾಗರಾಜ್ | 2,000.00 |
| 7. | ಹರ್ಷಿತ | 1,500.00 |
| 8. | ಆರ್.ಪಿ. ರವಿ ಶಂಕರ | 500.00 |
| 9. | ವಿ.ಎಸ್. ಮೂರ್ತಿ | 500.00 |
| 10. | ಎಸ್. ಶ್ರೀನಿವಾಸನ್ | 500.00 |
| 11. | ಎನ್. ಶ್ರೀನಿವಾಸ | 500.00 |

# ನೆನಪಿನಂಗಳದಲ್ಲಿ.....







ಶೃಂಗೇರಿ ಶ್ರೀ ಶ್ರೀ ಶ್ರೀಗಳು ಬೃಹಚ್ಚರಣ ಸಮುದಾಯದ ಹಿರಿಯ ದಿ॥ ಶ್ರೀಕಂಠೇಶ್ವರಐಯ್ಯರ್‌ರವರ ಮನೆಗೆ ಬಂದ ಸಂದರ್ಭದ ಚಿತ್ರಗಳು.

ಚಿತ್ರಕೃಪೆ : ಎಸ್. ಶಿವರಾಂ
ಸಂಘದ ಪೋಷಕ

# ವಾರ್ತಾ ಚಿತ್ರಗಳು




ಸಂಘದ ಪೋಷಕ ಡಾ. ಜಿ. ಸ್ವಾಮಿನಾಥ್ ದಂಪತಿಗಳನ್ನು ಮನೋವೈದ್ಯಕೀಯ ಸಂಸ್ಥೆಯ ಸ್ವರ್ಣಮಹೋತ್ಸವ ಸಂದರ್ಭದಲ್ಲಿ ಗೌರವಿಸಿದರು.




ಶ್ರೀ ಜಿ.ಎಸ್. ಸತ್ಯಮೂರ್ತಿಯವರಿಗೆ ಕನ್ನಡ ಸಾಹಿತ್ಯ ಪರಿಷತ್ತು 'ಕನ್ನಡ ಸೇವಾರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.




ಶ್ರೀ ಕೆ.ಗುಂಡಪ್ಪನವರಿಗೆ ಕನ್ನಡ ಸಾಹಿತ್ಯ ಪರಿಷತ್ತು 'ಕನ್ನಡ ಸೇವಾರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.



ಶ್ರೀ ಗಣೇಶ್‌ಕುಮಾರ್‌ರವರು ತಮ್ಮಲ್ಲಿರುವ electricians-plumbers ರವರನ್ನು ಕೇರಳದ ನಿರಾಶ್ರಿತರ ಸೇವೆಗೆ ಕಳುಹಿಸಿರುವುದು ಶ್ಲಾಘನೀಯ.



ಕಿತ್ತಗಾನಹಳ್ಳಿಯ 'ಸಹೃದಯ ವಿಪ್ರವೃಂದ'ದವರಿಂದ ನಡೆದ ಸಾಮೂಹಿಕ ಉಪಾಕರ್ಮದಲ್ಲಿ ಬೃಹಚ್ಚರಣ ಬಂಧುಗಳು





'ಚೆರುಬಿಮ್' ಮಕ್ಕಳ ಮೇಳವನ್ನು ಶ್ರೀಮತಿ ಸರಸ್ವತಿ ನಟರಾಜ್ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ರಮೇಶ್ ಆರ್. ಭಾಗವಹಿಸಿದ್ದರು

## ಧನ್ಯವಾದಗಳು



ಬೃಹಚ್ಚರಣ ಸಮುದಾಯದ ದಿ|| ಜಿ.ಕೆ. ನಾಗರಾಜ್‌ರವರ ಸೊಸೆ ಹಾಗೂ ಸಂಘದ ಸದಸ್ಯರಾದ ದಿ|| ಡಾ|| ನಂದಕಿಶೋರ್‌ರವರ ಪತ್ನಿ ಶ್ರೀಮತಿ ಅಂಜನಿ ನಂದಕಿಶೋರ್‌ರವರು ತಮ್ಮ ಕುಟುಂಬದ ಪರವಾಗಿ ತಮ್ಮ ಪತಿಯ ಸವಿನೆನಪಿನಲ್ಲಿ ಬೃಹಚ್ಚರಣ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಒಂದು ಲಕ್ಷ ರೂಪಾಯಿ ದೇಣಿಗೆ ನೀಡುತ್ತಿರುವುದನ್ನು ಸಂಘವು ಧನ್ಯತಾಭಾವದಿಂದ ಸ್ವೀಕರಿಸಿ, ಶ್ರೀಮತಿಯವರ ಕುಟುಂಬಕ್ಕೆ ಶುಭ ಹಾರೈಸುತ್ತದೆ.




| | |
|---|---|
| *If undelivered please return to :*<br>*President*<br>**'Bruhacharana Sangha'**<br>No. 8, 3rd Cross, Annaiyyappa Block, Kumarapark West, Bengaluru-560 020. | To,<br><br>Book-Post |

Published by Sri S. Somasundara, President, 'BRUHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, 080-26722034